
॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

866666

ಕಲ್ಯಾಣ ಕಿರಣ

ಫೆಬ್ರವರಿ - 2012


ಬೆಲೆ-20/-



ಬಸವ ಧರ್ಮದ ಮಹಾಜಗದ್ಗುರು ಪೀಠಾರೋಹಣ. ದಿ:13-1-2012



ಬಿಜೆಪಿ ರಾಜ್ಯಾಧ್ಯಕ್ಷ ಕೆ.ಎಸ್. ಈಶ್ವರಪ್ಪನವರಿಂದ ಶರಣಮೇಳ ಉದ್ಘಾಟನೆ



ಕಿತ್ತೂರಿನ ರಾಜಗುರು ಸಂಸ್ಥಾನ ಮಠದ ಸ್ವಾಮೀಜಿಯವರಿಂದ ಉದ್ಘಾಟನೆ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ-42 | ಬಸವ ಶಕೆ -878 | ಪಂಚವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-02 | ಫೆಬ್ರವರಿ- 2012 | ವಾರ್ಷಿಕ ಚಂದಾ 200 ರೂ.

ಯೋಗಿರಾಜ ಪೊರೆಯಯ್ಯ

ಗುರು ಶಿವನೆ ನಾ ನಿನ್ನ ಅನುದಿನವು ನೆನೆಯುವೆನು
ಪೊರೆಯಯ್ಯ ಮಹಾಯೋಗಿ ಮಂತ್ರ ಪುರುಷ ॥ ಪಲ್ಲವಿ ॥

ಅಂತರಾತ್ಮದಿ ದಿಟ್ಟ ಅನವರತ ನೀನಿಟ್ಟು
ಅನಿಮಿಷ ನೇತ್ರನು ಆಗಿ ನೀ ಮೆರೆದೆ.
ಯೋಗಿಗಳ ಸ್ಫೂರ್ತಿಯು ಆಗಿ ನೀನಿಹೆಯಯ್ಯ ! ಈ
ಜಗದ ಪ್ರಪ್ರಥಮ ಯೋಗಿರಾಜ ॥ 1 ॥

ಧಿಮಿತಕಿಟ ಧಿಮಿತಕಿಟ ಹೆಜ್ಜೆಯಂ ಹಾಕುತ್ತಾ
ತಾಳ ಮದ್ದಳೆ ಸಹಿತ ನೀನು ಕುಣಿದೆ
ನಾಟ್ಯ ಶಾಸ್ತ್ರವ ಜಗಕೆ ನೀನಿತ್ತು ಮೆರೆದೆ
ನಟರಾಜ ನೀನೆಂಬ ಖ್ಯಾತಿ ಪಡೆದೆ ॥ 2 ॥

ಗಾನ ಗಂಗೆಯ ಹರಿಸಿ ನಾದಯೋಗಿಯು ಆದೆ
ಕಾಮನಂ ನೀನುರುಹಿ ವಿರಾಗಿಯಾದೆ ॥
ಭಸಿತ- ರುದ್ರಾಕ್ಷಿಗಳೆ ಆಭರಣವಾಗಿರಲು
ಸರಳ ವ್ರತ ಧರಿಸಿರುವ ಮಹತ್ಯಾಗಿಯಾದೆ ॥ 3 ॥

ಶರಣು ಬಂದವರಿಗೆ ಅಭಯ ಹಸ್ತವ ನೀಡಿ
ಮೂಲಿಗನು ನೀನಾದೆ ಶಿವಭಕ್ತಿಪಥಕೆ
ನೀನು ತಪಗೈಯ್ದ ದಿನ ಶಿವರಾತ್ರಿಯಾಯಿತ್ತು
ಬನ್ನಗಳ ತಾ ತೊಡೆದು ಭವಬಾಧೆ ಹರಿಯಿತ್ತು ॥ 4 ॥

ಈ ಜಗದ ಪ್ರಪ್ರಥಮ ಯೋಗಿರಾಜನೆನಿಸಿ
ಮಡದಿ ಪಾರ್ವತಿಗೆ ಯೋಗವಿದ್ಯೆಯ ಕಲಿಸಿ
ಓಂಕಾರ ವಿಭೂತಿ ರುದ್ರಾಕ್ಷಿ ಹೊಂದಿದ
ಪಥವ ನೀಡಿದ ಶಿವಗೆ ಶರಣು ಸಲ್ಲಿಸುವೆ ॥ 5 ॥

-ಮಾತಾಜಿ

ಬೆಳ್ಳಿ ನಾಣ್ಯ ಬಿಡುಗಡೆ

25ನೆಯ ಶರಣಮೇಳದ ಸವಿನೆನಪಿಗಾಗಿ 10 ಗ್ರಾಂ ತೂಕದ ಬೆಳ್ಳಿನಾಣ್ಯವನ್ನು ಬಿಡುಗಡೆ ಮಾಡಲಾಗಿದ್ದು ಮುಖ ಬೆಲೆ ರೂ.1000/- ಕೊರಿಯರ್ ಛಾರ್ಜ ರೂ.40/-. ಬೇಕಾದವರು ಮನಿಯಾರ್ಡರ್ ಇಲ್ಲವೇ ಬ್ಯಾಂಕ್ ಡ್ರಾಫ್ಟ್ ಮೂಲಕ ಹಣ ಕಳಿಸಬೇಕು. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಬ್ಯಾಂಕ್ ಡ್ರಾಫ್ಟ್ ತೆಗೆಸುವವರು "ಬಸವ ಧರ್ಮ ಪೀಠ, ಬೆಂಗಳೂರು" ಹೆಸರಿಗೆ ತೆಗೆಸಿ, ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಕಳಿಸಬೇಕು. ಸಂಪರ್ಕಿಸುವ ದೂರವಾಣಿ : 9663385657.

ಕಿರಣಗನ್ನಡಿ

ಫೆಬ್ರವರಿ- ಮಾರ್ಚ್- ಏಪ್ರಿಲ್ - ಮೇ ತಿಂಗಳಲ್ಲಿ ಬರುವ ಹಬ್ಬ ಹುಣ್ಣಿಮೆ ಉತ್ಸವಗಳು

ಫೆಬ್ರವರಿ 20 - ಮಹಾಶಿವರಾತ್ರಿ - ಗಣ ಮೇಳ/ಸರ್ವಶರಣರ ದಿನಾಚರಣೆ

ಮಾರ್ಚ್ 13 - ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ವರ್ಧಂತಿ. ಆ ದಿನಾಂಕದಂದು ಪೂಜ್ಯ ಮಾತಾಜಿಯವರು ಬೆಂಗಳೂರಿನಲ್ಲಿ ಬಸವ ಮಂಟಪದಲ್ಲಿ ಇರುತ್ತಾರೆ.

ಮಾರ್ಚ್ 23 - ಚಾಂದ್ರಮಾನ ಯುಗಾದಿ, ಅಲ್ಲಮ ಪ್ರಭು ಜಯಂತಿ.

23, 24, 25 - ಅಲ್ಲಮಗಿರಿಯಲ್ಲಿ ಏಳನೆಯ ಲಿಂಗಾಯತ ಗಣ ಮೇಳ

ಏಪ್ರಿಲ್ 06 - ಅಕ್ಕಮಹಾದೇವಿ ಜಯಂತಿ

ಏಪ್ರಿಲ್ 28,29,30 - ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಶರಣೋತ್ಸವ

ಮೇ 27 - ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ ಮತ್ತು ಚಿನ್ಮಯ ಜ್ಞಾನಿ ಚನ್ನಬಸವೇಶ್ವರ ಜ್ಞಾನ ಪೀಠದ ಎರಡನೆಯ ವಾರ್ಷಿಕೋತ್ಸವ

Kalyana Kirana -Reg No.19988/70. Monthly Magaz ne Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 080-23131476, 22923736

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666



ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಅಲ್ಲಮ ಪ್ರಭು ಗಿರಿಯಲ್ಲಿ 2012ರ



ಮಾರ್ಚ್ 23, 24 ಮತ್ತು 25 ರಂದು ಏಳನೆಯ ಲಿಂಗಾಯತ ಗಣಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸ್ಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ -ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆ ಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆ ಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀ ಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್) ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು

ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್, ನೀರಿನ ತೊಟ್ಟಿ, ಕಾರ್ಯಾಲಯ (Office)ಮತ್ತು ವಾಸಕ್ಕೆ 3 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಈ ಸದ್ಯ ಪ್ರತಿ ಅಮವಾಸ್ಯೆಯಂದು ಶರಣ ಸಂಗಮ -ಪ್ರಾರ್ಥನೆ ಮತ್ತು ಅನುಭವ ಗೋಷ್ಠಿಯನ್ನು ನಡೆಸಲಾಗುತ್ತಿದ್ದು ಸುತ್ತಲಿನ ಪ್ರದೇಶದಿಂದ ಶರಣ ಬಂಧುಗಳು ಅಲ್ಲಮ ಗಿರಿಗೆ ಬರುತ್ತಾರೆ. ಮುಂದೆ ವಿಸ್ತಾರವಾದ ಕಾರ್ಯ ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸಲಾಗುವುದು. ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳವರಿಂದ ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು ಹೊಂದುವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ದಿನ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸ ಲಾಗುವುದು. ದಿ.23-3-2012 ಬೆಳಿಗ್ಗೆ 10.30ಕ್ಕೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ), ಅಲ್ಲಮಪ್ರಭು ತೊಟ್ಟಿಲು ಕಾರ್ಯಕ್ರಮ ಶನಿವಾರ ದಿ.24-3-12ರಂದು ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ - ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತ್ತಿಯಿಂದ ಮೆರವಣಿಗೆ ಮೂಲಕ ಗುಡಿಗೆ ಹೋಗಲಾಗುವುದು. ನಂತರ ಅಲ್ಲಮ ಪ್ರಭು ಯೋಗ ಪೀಠಾ ರೋಹಣ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ ಮತ್ತು ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳವರಿಂದ ಭಾನುವಾರ ದಿ.25-3- 2012 ರಂದು ಬೆಳಿಗ್ಗೆ 10-30 ಕ್ಕೆ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು: ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ: ಅಳತೆ; ಇದು ಕೊಲ್ಹಾಪುರ ದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಅಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೂಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ೩ ಲಭ್ಯವಿದೆ. ಪ್ಯಾಸೆಂಜರ್ ಟ್ರೇನ್, ಹರಿಪ್ರಿಯ ಎಕ್ಸ್‌ಪ್ರೆಸ್ ಹಾತ್‌ಕಣಂಗಲೆಯಲ್ಲಿ ನಿಲುತ್ತವೆ. ಹಾತ್‌ಕಣಂಗಲೇ ಬಸ್‌ಸ್ಟಾಂಡ್ ಎದುರಿಗೆ ಉತ್ಸವ ಸಮಿತಿಯ ಕಾರ್ಯಾಲಯ ತೆರೆದಿದ್ದು ಊರಿಂದ ಬಂದವರು ಇಲ್ಲಿ ವಿಶ್ರಮಿಸಿಕೊಂಡು ರಾಮಲಿಂಗಕ್ಕೆ ಹೋಗುವ ರಸ್ತೆಯಲ್ಲಿ ಅಲ್ಲಮಗಿರಿಗೆ ಬರಬಹುದಾಗಿರುತ್ತದೆ. ವಾಹನಗಳ ವ್ಯವಸ್ಥೆ ಇರುತ್ತದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತ್ತದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ. 3ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು 16ರ ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

ಮಾರ್ಚ್ 23, 24 ಮತ್ತು 25 ರಂದು ನಡೆಯುವ ಏಳನೆಯ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಉಪಾಹಾರದ ವೆಚ್ಚ ಭರಿಸುವವರು	: 15000	(ಹದಿನೈದು ಸಾವಿರ)ರೂಗಳು.
ಮಹಾಪೋಷಕರು	: 10000	ರೂ ಮತ್ತು ಮೇಲೆ ಕೊಟ್ಟವರು
ಪೋಷಕರು	: 5000	ರೂ ಮತ್ತು ಮೇಲೆ ಕೊಟ್ಟವರು
ಹಿತೈಷಿಗಳು	: 500	ರೂ
ಉತ್ಸವ ಸಮಿತಿ ಸದಸ್ಯರು	: 250	ರೂ
ದಾನಿಗಳು	: 1000	ರೂ ಮತ್ತು ಮೇಲೆ ಕೊಟ್ಟವರು
ಪ್ರತಿನಿಧಿ ಶುಲ್ಕ	: 150	ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು ಅಥವಾ ಬಸವ ಮಹಾಮನೆ ಚಾರಿಟಬಲ್‌ಟ್ರಸ್ಟ್. ಎಂದಾದರೂ ಬರೆಸಬಹುದು.

ಪ್ರತಿ ವರ್ಷವೂ 1000 (ಒಂದು ಸಾವಿರ)ರೂ ಕೊಡುವ 770 ಜನ ಶರಣರ ಪಟ್ಟಿಯನ್ನು ಉತ್ಸವ ಸಮಿತಿಯವರು ಸಿದ್ಧಪಡಿಸುತ್ತಿದ್ದಾರೆ. ಸ್ವಯಂ ಪ್ರೇರಣೆಯಿಂದ ಯಾರು ಬೇಕಾದರೂ ತಮ್ಮ ಹೆಸರನ್ನು ಬರೆಸಬಹುದು.

ಸಂಪರ್ಕಿಸಬೇಕಾದ ವಿಳಾಸ

ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು
ಲಿಂಗಾಯತ ಗಣಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ
ಆಳತೆ ಗ್ರಾಮ, ತಾ -ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ : (0)9420585881

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23131476/22923736

ಕಲ್ಯಾಣ ಕಿರಣ – ನವೀಕರಿಸಿರಿ.

ಕಲ್ಯಾಣ ಕಿರಣ ಮಾಸಪತ್ರಿಕೆಯ ವಾರ್ಷಿಕ ಚಂದಾ 200/-(ಎರಡು ನೂರು)ರೂಪಾಯಿ ಮತ್ತು ಪಂಚ ವಾರ್ಷಿಕ ಚಂದಾ 1000 (ಒಂದು ಸಾವಿರ) ರೂಪಾಯಿ. ಹಣ ತುಂಬಿ ನವೀಕರಿಸಿರಿ.

– ಸಂಪಾದಕರು.

ಗಣ ಮೇಳದಲ್ಲಿ ಸಂದೇಶ ವಾಚನ

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

(ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಿಂದ ಅಥವಾ ಸರಿಯಾಗಿ ಓದಬಹುದಾದ ಆಹ್ವಾನಿತ ಅತಿಥಿಗಳಿಂದ)

॥ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿ, ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಈ ಪವಿತ್ರ ಶರಣ ಗಣ ಮೇಳದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಶರಣ 'ಗಣ ಮೇಳ' ವು ಅತ್ಯಂತ ಪವಿತ್ರವಾದ ಗಣ ಸಮಾವೇಶ. ಧರ್ಮಪಿತರ ಕಾಲದಲ್ಲಿ ಹಲವಾರು ಗಣಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯೊಳು ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ, ಭಕ್ತಿಯ ಬಣ್ಣವೇರಿಸಿದ ಕಾರಣಿಕರಾದರು.' ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ ' ಎಂದರೇನು ? ಗಣ ಎಂದರೆ ಸಮೂಹ, ಸಮಾಜ, ಧರ್ಮಪಿತ ಬಸವಣ್ಣನವರು 'ಗಣ ಧರ್ಮ 'ಎಂಬುದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ ಎಂದು ಘೋಷಿಸಿ ತಾತ್ತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ.

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿ ಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ಕಾಣುತ್ತಲೇ 'ಕೊ ಕ್ಕೊ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ
ಬಿನ್ನಪವ ಅವಧಾರು; ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ
ಕರೆದೊಡೋ ಎನಿಸಿದಡೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ

ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು ಪರಮಾತ್ಮನಿಗೆ ಶರಣಾಗುವುದು; ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. 'ಗಣ ಮೇಳಾಪ' -ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲ ಶಸ್ತ್ರ

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ ಒಟ್ಟುಗೂಡಿದ್ದೇವೆ. ಈ ಗಣ ಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ-ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮ ಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ.
ಜಗತ್ ಕರ್ತನಿಗೆ ಶರಣಾಗಿದ್ದೇನೆ
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ತ್ವದ ಪ್ರತೀಕವಾಗಿದೆ. ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ನಾವಿಲ್ಲಿ ಸೇರಿದ್ದೇವೆ.

ಸರ್ವ ಶರಣರ ದಿನಾಚರಣೆ

ಒಂದು ತತ್ತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (heritage) ಸಾಗಿಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗಾಯತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ, ಬಸವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ, ವೀರ ಮಾತೆ ಅಕ್ಕನಾಗಲಾಂಬಿಕೆ ಎಂಬ ಸಪ್ತ ಗಣಾಧೀಶರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈವರೆಗೆ ಆಗಿ ಹೋಗಿರುವ ಲಿಂಗಾಂಗಯೋಗಿಗಳು, ಶರಣರು ಅಸಂಖ್ಯಾತರು. ಅವರ ಜಯಂತಿ -ಲಿಂಗೈಕ್ಯ ದಿನ ಆಚರಿಸಲು ವರ್ಷದ 365 ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟಮೊದಲ ಯೋಗಿಯೂ, ಓಂಕಾರದ ದ್ರಷ್ಟಾರನೂ, ಭಾರತೀಯ ಧಾರ್ಮಿಕ ಪರಂಪರೆಯ ಮೂಲಿಗನಾದ ವೇದಪೂರ್ವ ಪ್ರವಾದಿ "ಯೋಗಿರಾಜ ಶಿವ"ನ ತಪಸ್ಸಿನ ದಿನವಾದ "ಶಿವರಾತ್ರಿಯಂದು" ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ.

ಬಸವ ಧರ್ಮ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸ್ವರೂಪವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕ್ರಿ.ಶ. 1134ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು. ಶೈವ ಬ್ರಾಹ್ಮಣರಾದ ಮಾದಿರಾಜ-ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹುದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ ಜಾತಿಪದ್ಧತಿ ಇವುಗಳ ಪ್ರತಿಫಲವಾದ

ಅಸ್ಪೃಶ್ಯತೆ, ಯಜ್ಞ-ಯಾಗಾದಿಗಳ ಹಿಂಸೆ, ಕ್ರೂರದೇವತೆಗಳಿಗೆ ಕೊಡುವ ಪ್ರಾಣಿಬಲಿ, ಪೂಜಾದಿಗಳಲ್ಲಿದ್ದ ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯಗಳ ಸಂಕುಚಿತತೆ, ದೇವ-ಭಕ್ತರ ನಡುವೆ ಇವು ಬೆಳೆಸಿದ ಕಂದರ, ಸ್ತ್ರೀ ಶೋಷಣೆ ಮುಂತಾದವುಗಳನ್ನು ಕಂಡು ಬೇಸತ್ತು, ನೊಂದು ತಾಯಿ-ತಂದೆ, ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸ ಧರ್ಮದ ರೂಪುರೇಷೆ ಮೂಡಿಸಿಕೊಂಡು ಬಸವರಸ -ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು. ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ, ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು .ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು.ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟಿನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು . ಅವರ ನಿರ್ಗಮನದ ನಂತರ ವಿವಾಹದಲ್ಲಿ ಭಾಗಿಗಳಾದ ಶರಣರ ವಧೆಯಾಯಿತು.ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದು ಗುರು ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ದ ಪಂಚಮಿ ದಿನ ಕ್ರಿ.ಶ. 1196ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಆದಿ ಗುರು ಬಸವಣ್ಣನವರು ನಮಗೆ ವಿಶೇಷ ಶರಣ ಪಥವನ್ನು ನೀಡಿದ್ದಾರೆ. ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ತ್ವಗಳು ಷಡಾಚಾರಗಳು

1. ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತನು ಕಳಿಸಿದ ಪ್ರತಿನಿಧಿ, ದೇವರ ಕರುಣೆಯ ಕಂದ (ಬಸವಾಚಾರ)
2. ದೇವನು ಒಬ್ಬ; ಲಿಂಗದೇವನನ್ನು ಇಷ್ಟಲಿಂಗರೂಪದಲ್ಲಿ ಪೂಜಿಸಬೇಕು. (ಲಿಂಗಾಚಾರ);
3. ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು (ಸದಾಚಾರ)
4. ಮಾನವರೆಲ್ಲರೂ ಸಮಾನರು. ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)
5. ಅನ್ಯಾಯವನ್ನು-ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)
6. ವ್ಯಕ್ತಿಗಿಂತಲೂ ಸಮಾಜ-ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು. (ಭೃತ್ಯಾಚಾರ)

<u>ದರ್ಶನ ಶಾಸ್ತ್ರ :</u> ಷಟಸ್ಥಲ - ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ ನೆಲೆ-ಲಿಂಗದೇವನಲ್ಲಿ ಒಡವೆರೆದು ಒಂದಾಗುವುದು, ಅಂಗ ಲಿಂಗದೊಡನೆ ಒಂದಾಗಬೇಕಾದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲ (stages) ಗಳನ್ನು ಅಳವಡಿಸಿಕೊಳ್ಳಬೇಕು.

<u>ಆಚರಣೆ :</u> ಅರ್ಚನೆ-ಅರ್ಪಣೆ-ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು! ಕಾಯಕ ಮಾಡಿ ಊಟ ಮಾಡುವುದು; ಶರಣರ ಸಂಗದಲ್ಲಿ ಒಡನಾಡುವುದು.

<u>ಲಾಂಛನಗಳು :</u> ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು-ಲಿಂಗ-ಜಂಗಮ-ವಿಭೂತಿ-ರುದ್ರಾಕ್ಷಿ-ಮಂತ್ರ, ಕರುಣೋದಕ-ಕರುಣ ಪ್ರಸಾದ ಅಳವಡಿಸಿಕೊಳ್ಳುವುದು.

<u>ಸಪ್ತನೀತಿ ಸೂತ್ರ :</u> ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟು ಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿ ಕೊಂಡಿದ್ದಾರೆ. ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅತ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು - ಒಡೆಯುವುದಿಲ್ಲ

ವಿಶ್ವಗುರು ಬಸವಣ್ಣನವರು ವಿಶ್ವ ಕುಟುಂಬತ್ವದ ಬೋಧೆ ನೀಡಿದ್ದಾರೆ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ

ಇವನಾರು ? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ, ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ, ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪ ಹೊಂದಿದೆ. ಕಾರಣವೇನೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ, ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವ ಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣ ಮೇಳದ ಇಂದು ತೊಡೋಣ.

ಜಯ ಗುರು ಬಸವೇಶ ಹರಹರ ಮಹಾದೇವ

ಎಲ್ಲರಿಗೂ ಶರಣು ಶರಣಾರ್ಥಿ.

ಸಂಪಾದಕೀಯ : – ಮಾತಾಜಿ

1. ದಲಿತರಿಗೆ ಹಿಂದೂ ದೀಕ್ಷೆ–ಅಭಿನಂದನೀಯ

ದಿ.30–1–12ರ ದಿನ ಪತ್ರಿಕೆಯಲ್ಲಿ ಒಂದು ಸುದ್ದಿ ನಗಣ್ಯವಾಗಿ ಪ್ರಕಟಗೊಂಡಿತು. ಅದು ಮುಖಪುಟದಲ್ಲಿ ಬರಬೇಕಾಗಿತ್ತು. ನಮ್ಮ ದಿನಪತ್ರಿಕೆಗಳ ಮುಖಪುಟಗಳಲ್ಲಿ ರಾಜಕೀಯ ಮುಂದಾಳುಗಳ ಹೊಯ್ದಾಟ–ಬೈದಾಟ, ಅತ್ಯಾಚಾರ, ದರೋಡೆ ಮುಂತಾದ ಸುದ್ದಿಗಳಿಗೇ ಪ್ರಾಮುಖ್ಯತೆ ಇರುವ ಕಾರಣ ಇಂಥ ಸುದ್ದಿಗಳಿಗೆ ಅಷ್ಟೊಂದು ಮಹತ್ವದ ಸ್ಥಾನ ದೊರೆಯದು. ಆ ಸುದ್ದಿ ಯಾವುದೆಂದರೆ ಗಜೇಂದ್ರಗಡದಲ್ಲಿ ಪೂಜ್ಯ ಶ್ರೀ ಪೇಜಾವರ ಶ್ರೀಗಳ ಆದೇಶದಂತೆ ದಲಿತರಿಗೆ ಹಿಂದು ದೀಕ್ಷೆಯನ್ನು ಓರ್ವ ಆಚಾರ್ಯರು ನೀಡಿದ್ದಾರೆ. ಕೊರವರು. ಕಲಾಲರು ಇತ್ಯಾದಿ ಹಿಂದುಳಿದ ವರ್ಗದ 286 ಜನರು ಹಿಂದು ದೀಕ್ಷೆಯನ್ನು ಪಡೆದಿದ್ದಾರೆ. ಇನ್ನೂ ವಿಶೇಷವೆಂದರೆ ಈ ಹಿಂದೂ ದೀಕ್ಷೆಯಲ್ಲಿ ಅವರಿಗೆ ಯಜ್ಞೋಪವೀತ ಕೊಡಲಾಗಿದೆ. ಭಲೇ ಭಲೆ!

ಇದು ಎಂದೋ ಆಗಬೇಕಿತ್ತು. 1969ರಲ್ಲಿ ಉಡುಪಿಯಲ್ಲಿ ನಡೆದ ಸಭೆಯಲ್ಲಿ ಅಸಂಖ್ಯಾತ ಸಂತರು, ಸ್ವಾಮಿಗಳು ಸೇರಿದ ಸಭೆಯಲ್ಲಿ ನಾನು ಹೇಳಿದ್ದೆ, "ಮದುವೆಯಲ್ಲಿ ವರನು ವಧುವಿಗೆ ತಾಳಿ ಕಟ್ಟುವನು. ಆವರೆಗೆ ನನ್ನದು ಎನ್ನುತ್ತಿದ್ದವಳು ನಂತರ ನಮ್ಮದು ಎನ್ನುತ್ತಾಳೆ. ಶೂದ್ರರು, ದಲಿತರಿಗೆ ಯಾವೊಂದು ದೀಕ್ಷೆಯನ್ನು ಕೊಡದೆ ಇದ್ದರೆ ಅವರಿಗೆ ಹೇಗೆ ಹಿಂದು ಧರ್ಮದ ಬಗ್ಗೆ ಅಭಿಮಾನ ಉಳಿಯಲು ಸಾಧ್ಯ? ಜಾಗೃತರಾದ ಶೂದ್ರರು, ದಲಿತರು ನಮಗೆ ಹಿಂದು ಧರ್ಮ ಏನು ಕೊಟ್ಟಿದೆ, ಏಕೆ ಹಿಂದುವಾಗಿ ಉಳಿಯಬೇಕು? ಎಂದು ಪ್ರಶ್ನಿಸುತ್ತಾರೆ. ಕಡೆಗೆ ಒಂದು ರುದ್ರಾಕ್ಷಿಯನ್ನಾದರೂ ಕೊಟ್ಟು ಅವರಿಗೆ ಮಂತ್ರದೀಕ್ಷೆ ಕೊಡಬೇಕು. ಎಲ್ಲ ಮಠಾಧಿಪತಿಗಳೂ ಈ ರೀತಿ ಕಾರ್ಯಕ್ರಮ ರೂಪಿಸಬೇಕು. ಇಲ್ಲದಿದ್ದರೆ ಇಸ್ಲಾಂ, ಕ್ರೈಸ್ತ ಧರ್ಮಗಳಿಗೆ ಆಗುವ ಮತಾಂತರವನ್ನು ತಡೆಗಟ್ಟಲು ಸಾಧ್ಯವಿಲ್ಲ." ನನ್ನ ವೀರೋಚಿತ ಧ್ವನಿಯ ಭಾಷಣ ಕೇಳಿ ದಂಗಾದ ಶ್ರೀಮತಿ ವಿಜಯರಾಜೇ ಸಿಂಧ್ಯ ಮತ್ತು ಶ್ರೀಮತಿ ಜಯದೇವಿ ತಾಯಿ ಲಿಗಾಡೆ ನನ್ನನ್ನು ಕೊಂಡಾಡಿದರು. "ಇಂದು ದುರ್ಗಾ ಮಾತೆಯ ದರ್ಶನವಾಯಿತು." ಎಂದರು ವಿಜಯರಾಜೇ ಸಿಂಧ್ಯರವರು. ಕಳೆದ ವರ್ಷ ಒಂದು ಹೆಜ್ಜೆ ಮುಂದೆ ಇಟ್ಟು ಪೇಜಾವರ ಶ್ರೀಗಳು ಶೂದ್ರಾದಿ ದಲಿತರಿಗೆ ವೈಷ್ಣವ ದೀಕ್ಷೆಯನ್ನು ಕೊಟ್ಟು ಹರಿಭಕ್ತರನ್ನಾಗಿ ಮಾಡುವ ವಿಚಾರ ವ್ಯಕ್ತಪಡಿಸಿದರು. ಇದೂ ಅರ್ಥಂಬರ್ಥವೆ. ಇದೀಗ ಪೂರ್ಣ ಹೆಜ್ಜೆಯನ್ನು ಮುಂದಿಟ್ಟು ಯಜ್ಞೋಪವೀತವನ್ನು ನೀಡಿ ಹಿಂದು ದೀಕ್ಷೆ ಕೊಟ್ಟಿರುವುದಾಗಿ ವರದಿಯಾಗಿದೆ. ಇದು ಎಂದೋ ಆಗಬೇಕಿತ್ತು. ತಡವಾಗಿಯಾದರೂ ನಿರ್ಧಾರ ತೆಗೆದುಕೊಂಡಿದ್ದಾರೆ. ಹಿಂದು ಧರ್ಮದ ಬಗ್ಗೆ ಪೇಜಾವರ ಶ್ರೀಗಳಿಗೆ ಇರುವ ಕಳಕಳಿಯನ್ನು ಮೆಚ್ಚಬೇಕು. ಉಳಿದ ವೈದಿಕ ಸ್ವಾಮಿಗಳು ತಮ್ಮ ಮಠ ಸಂಪ್ರದಾಯ ಮಡಿ–ಮೈಲಿಗೆ, ತಮ್ಮ ಜಾತಿಯ ಜನರ ಹಿತ, ಇಷ್ಟರಲ್ಲೇ ಆಸಕ್ತರಾಗಿರುವಾಗ ಪೇಜಾವರ ಶೀಗಳು ಮಾತ್ರ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿ, ಕ್ರಿಯೋನ್ಮುಖರಾಗಿರುವುದು ಅಭಿನಂದನೀಯ. ಸಾವಿರಾರು ವರ್ಷಗಳ ಕುರುಡು ಸಂಪ್ರದಾಯವನ್ನು ಶ್ರೀಗಳು ದಾಟಿ ಶೂದ್ರಾದಿ ದಲಿತರಿಗೆ ಯಜ್ಞೋಪವೀತ ನೀಡಿರುವುದು ದಿಟ್ಟ ಹೆಜ್ಜೆ; ಅಭಿನಂದನೀಯ.

2. ಜಾತಿಗೊಂದೊಂದು ಗುರುಪೀಠ ಅನಗತ್ಯವೇ?

ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಧರ್ಮ ಜಾಗೃತಿ ಅಭಿಯಾನವನ್ನು ಹಾಕಿಕೊಂಡು 25ನೇ ಶರಣ ಮೇಳದ ನಿಮಿತ್ತ ಪೂಜ್ಯ ಶ್ರೀ ಮಾತೆ ದಾನೇಶ್ವರಿ ಮತ್ತು ಪೂಜ್ಯ ಶ್ರೀ ಮಾತೆ ಸತ್ಯಾದೇವಿಯವರು 26 ಹಳ್ಳಿಗಳನ್ನು ಸಂದರ್ಶಿಸಿದರು. ಎಲ್ಲ ಕಡೆಯಲ್ಲಿ ಅಭೂತಪೂರ್ವ ಸ್ವಾಗತ ದೊರಕಿತು. ಒಂದು ಊರಲ್ಲಿ ಮಾತ್ರ "ನಾವು ಊರಲ್ಲಿ ಬರಗೊಡುವುದಿಲ್ಲ" ಎಂದು ಸಿಟ್ಟಿಗೆದ್ದಿದ್ದಾರೆ. ಆಗ "ನಿಮ್ಮ ಕೋಪ ಏತಕ್ಕಾಗಿ? ನಿಮ್ಮ ಸಂದೇಹ ಏನಿದ್ದರೂ ಕೇಳಿರಿ." ಎಂದು ಇವರು ಹೇಳಿದಾಗ, "ನೀವು ಜಾತಿಗೊಂದೊಂದು ಪೀಠ ಮಾಡಿ ಸಮಾಜವನ್ನು ಒಡೆಯುತ್ತಿದ್ದೀರಿ." ಎಂದು ಅವರು ಹೇಳಿದ್ದಾರೆ. ಆಗ ನಮ್ಮವರು, "ನಾವು

ಅವರ ಕಡೆಯವರಲ್ಲ. ಇವರೂ ಚಿತ್ರದುರ್ಗದವರೇ ಆದರೂ ಇವರದು ಕೂಡಲ ಸಂಗಮದ ಬಸವ ಧರ್ಮ ಪೀಠ. ನಾವು ಜಾತಿಗೊಂದೊಂದು ಪೀಠ ಮಾಡುವವರಲ್ಲ." ಎಂದು ಹೇಳಿದ್ದಾರೆ. ನಂತರ ಜನರು ಜ್ಯೋತಿಯನ್ನು ಸ್ವಾಗತ ಮಾಡಿ ಸಭೆ ಮಾಡಿಸಿದ್ದಾರೆ. ಈಗ 3 ದಿವಸಗಳ ಕೆಳಗೇ ನಿಜ ಶರಣ ಅಂಬಿಗರ ಚೌಡಯ್ಯ ಪೀಠವು ಚಿತ್ರದುರ್ಗದ ಪೂಜ್ಯ ಮುರುಘಾ ಶರಣರ ನೇತೃತ್ವದಲ್ಲಿ ಸ್ಥಾಪನೆಯಾಯಿತು. ಪೂಜ್ಯ ಶ್ರೀ ಶಾಂತಮುನಿ ಸ್ವಾಮಿಗಳು ಪಟ್ಟಾಧಿಕಾರ ವಹಿಸಿಕೊಂಡರು. ಪೂಜ್ಯ ಶ್ರೀಗಳು ಜಾತಿಗೊಂದೊಂದು ಪೀಠವನ್ನು ಹುಟ್ಟು ಹಾಕಿ ಸಮಾಜದನ್ನು ಒಡೆಯುತ್ತಿದ್ದಾರೆಂದು ಕೆಲವರು ಆರೋಪಿಸುತ್ತಿದ್ದಾರೆ. ಈ ಬಗ್ಗೆ ಸುದೀರ್ಘವಾಗಿ ಆಲೋಚಿಸುವುದು ಅಗತ್ಯವಿದೆ. ಶ್ರೀಗಳು ಯಾವ ಸಮಾಜವನ್ನು ಒಡೆಯುತ್ತಿದ್ದಾರೆ? ಹಿಂದು ಸಮಾಜವನ್ನೆ ? ಅದು ಒಡೆದ ಕನ್ನಡಿಯಂತೆಯೇ ಇದೆ. ಅಲ್ಲಿ ಜಾತಿಯ ಸೀಳುಗಳು ಸುಭದ್ರವಾಗಿದ್ದು ಎಂದೆಂದೂ ಒಂದಾಗುವುದಿಲ್ಲ. ಜಾತಿಯ ಶ್ರೇಷ್ಠತೆ ಕನಿಷ್ಠತೆ ಭಾರತೀಯರಲ್ಲಿ ರಕ್ತಗತವಾಗಿರುತ್ತದೆ. ಶ್ರೀಗಳು ಮಾದಾರ, ಹೆಳವ, ಮೇದಾರ, ಮಡಿವಾಳ, ಬೋವಿ, ಲಂಬಾಣಿ, ಹಡಪದ ಇತ್ಯಾದಿ ಶೋಷಿತ ಜಾತಿಗಳವರಿಗೆ ಗುರುಪೀಠಗಳನ್ನು ಮಾಡಿದ್ದಾರೆ. ಅವರ ಸಮಾಜಗಳ ಯೋಗಕ್ಷೇಮ ನೋಡುವವರ ಅಗತ್ಯ ಇದೆಯಲ್ಲವೆ ? ಲಿಂಗಾಯತ ಮತ್ತು ಬ್ರಾಹ್ಮಣ ಸಮಾಜದ ಗುರುಗಳು ಅವರೆಲ್ಲರ ಯೋಗಕ್ಷೇಮ ನೋಡಲು ಸಾಧ್ಯವೆ? ನೋಡುತ್ತೇವೆಂದರೂ ಲಿಂಗಾಯತರೊಳಗಣ ಮಡಿವಂತ ಜಾತಿಗಳವರು ಬಿಡುವರೆ?

ಅಂದು ಗುರು ಬಸವಣ್ಣನವರ ಕಾಲದಲ್ಲಿ ಎಲ್ಲ ಜಾತಿಗಳವರನ್ನೂ ಒಂದು ಗೂಡಿಸಲಾಯಿತು. ಇಂದು ಜಾತಿಗೊಂದೊಂದು ಪೀಠ ಮಾಡುವ ಮೂಲಕ ಬಸವ ತತ್ತ್ವಕ್ಕೆ ವಿರುದ್ಧ ಹೋಗುವಂತಾಗಿದೆ ಎಂದು ಕೆಲವರ ತೀವ್ರ ಆಕ್ಷೇಪ. ನಿಜ, ಕಾಲ ಬದಲಾಗಿದೆ. ಅಂದು ಧರ್ಮ, ದೇವರು, ಸಂಸ್ಕಾರ ಇಲ್ಲದವರಿಗೆ ಅವನ್ನು ಕೊಡುತ್ತೇವೆ ಎಂದು ಗುರು ಬಸವಣ್ಣನವರು ಅಂದುದು ಪರಮಭಾಗ್ಯವಾಯಿತು. ಅವನ್ನು ಪಡೆದುಕೊಳ್ಳಲು ಯಾವ ತ್ಯಾಗಕ್ಕೂ ಸಿದ್ದರಾದರು. ಮೊದಮೊದಲಿಗೆ ಬಂದವರೆಲ್ಲ ಶೂದ್ರ, ದಲಿತ ಮೂಲದವರೆ! ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶಮಾಡಲೆಳಸಿದಾಗ ಹೋರಾಡಿ ರಕ್ಷಿಸಿದವರೂ ಅವರೆ ! ಈ ಕೃತಜ್ಞತೆಯಿಂದಲೇ ಸಮಗಾರ ಹರಳಯ್ಯನವರು ತಮ್ಮ ಮೈ ಚರ್ಮವನ್ನೇ ತೆಗೆದು ಚಮ್ಮಾವುಗೆ ಮಾಡಿಕೊಟ್ಟರು. ಈಗ ಆ ತುಡಿತ ಇಲ್ಲ. ಜನರು ಲಿಂಗಭೋಗಿಗಳಾಗುವ ಬದಲು ಅಂಗಭೋಗಿಗಳಾಗುತ್ತಿದ್ದಾರೆ. ದೇವರು ಧರ್ಮಕ್ಕಾಗಿ ಅಂದಿನವರು ತ್ಯಾಗ ಮಾಡಿದರೆ ಇಂದಿನವರು ಸರ್ಕಾರ ಕೊಡುವ ಸವಲತ್ತುಗಳಿಗಾಗಿ ಧರ್ಮ, ದೇವರನ್ನು ಬಿಡಲು ಸಿದ್ಧರಾಗಿದ್ದಾರೆ. ಸ್ವತಃ ಸರ್ಕಾರಗಳು ಜಾತಿಯ ಸೀಳುಗಳನ್ನು ಜಾಸ್ತಿ ಮಾಡಿ, ವಿಂಗಡಿಸಿ ಸವಲತ್ತುಗಳಿಗಾಗಿ ಪರಸ್ಪರ ಹೋರಾಡುವಂತೆ ಮಾಡುತ್ತಿವೆ. "ನಾವು ಶ್ರೇಷ್ಠರು ಎಂದು ಬೀಗಿ ಎಲ್ಲರ ತಲೆಯ ಮೇಲೆ ಕೈ ಇಡುವ ಹಕ್ಕು ನಮಗಿದೆ" ಎನ್ನುತ್ತಿದ್ದ(ಅಯ್ಯನವರು)ವರೇ ಪರಿಶಿಷ್ಟ ಜಾತಿಯ ಸವಲತ್ತಿಗೆ ಪ್ರಯತ್ನಿಸುವಾಗ ಇನ್ನು ಹಿಂದುಳಿದ ಜಾತಿಗಳವರ ಪಾಡೇನು? ಆದ್ದರಿಂದ ಹಿಂದುಳಿದ ವರ್ಗಗಳವರ ಅಳಲನ್ನು ಆಲಿಸಲು ಅವರಿಗೆ ಗುರುಗಳ, ಗುರುಪೀಠಗಳ ಆವಶ್ಯಕತೆ ಇದೆ. ಅದರಿಂದ ಲಿಂಗಾಯತ ಸಮಾಜಕ್ಕೇನೂ ತೊಂದರೆ ಇಲ್ಲ.

ಹೊಸದಾಗಿ ಆಗುತ್ತಿರುವ ಕೆಲವು ಗುರುಪೀಠಗಳಿಗೆ ಧಾರ್ಮಿಕ ಹಿನ್ನೆಲೆಗಿಂತಲೂ ರಾಜಕೀಯ ಹಿನ್ನೆಲೆ ಇರುವುದು; ಗುರು ಪೀಠಗಳು ರಾಜಕೀಯ ವ್ಯಕ್ತಿಗಳ ಹಿಡಿತಕ್ಕೆ ಸಿಕ್ಕಿರುವುದು ಕಾಣಬರುತ್ತಿದೆ. ಸ್ವಾಮಿಗಳನ್ನು ಕೈಗೊಂಬೆಗಳನ್ನಾಗಿ ಮಾಡಿಕೊಂಡು ರಾಜಕೀಯ ವ್ಯಕ್ತಿಗಳೇ ಕಾರುಬಾರು ನಡೆಸಿರುವುದು ಒಂದಾದರೆ ಕೆಲವು ಸ್ವಾಮಿಗಳು ಭಯೋತ್ಪಾದಕರಾಗಿದ್ದಾರೆ ಎಂದು ಕೆಲವು ಭಕ್ತರ ಅನಿಸಿಕೆ. "ನಾವು ಸಾಮಾನ್ಯ ಕಾಯಕಗಳವರು, ಸ್ಥಿತಿವಂತರಲ್ಲ, ನಮ್ಮ ಜಾತಿ ಪೀಠದ ಸ್ವಾಮಿಗಳು ಬಂದು ಕಡ್ಡಾಯವಾಗಿ ಇಷ್ಟು ಕಾಣಿಕೆ ಕೊಡಬೇಕು ಎಂದು ಹೇಳುವ ಭಯೋತ್ಪಾದಕರಾಗುತ್ತಿದ್ದಾರೆ. ಮೊದಲೇ ನಾವು ಸುಖವಾಗಿದ್ದೆವು." ಎಂದು ಒಬ್ಬರು ಹೇಳಿದರು. ಎಲ್ಲ ಜಾತಿ ಜನಾಂಗಗಳವರು ಮುಂದೆ ಬರಲಿ ಎಂಬ ಆಶಯ ಗುರು ಬಸವಣ್ಣನವರದು. ಆದ್ದರಿಂದ ಆ ಆಶಯಕ್ಕೆ ಅನುಗುಣವಾಗಿಯೇ ಇಂದು ಗುರು

ಪೀಠಗಳಾಗುತ್ತಿವೆ ಎಂದು ಸಮಾಧಾನ ತಾಳೋಣ. ಇಂದಿನ ವಾತಾವರಣದಲ್ಲಿ 12ನೇ ಶತಮಾನದಂತೆ ಎಲ್ಲರೂ ಲಿಂಗದೀಕ್ಷೆಯನ್ನು ಪಡೆದು ಧರ್ಮವನ್ನು ಸ್ವೀಕಾರ ಮಾಡಲಾರರು. ಅವರ ಜಾತಿಗಳಲ್ಲಿಯೇ ಇದ್ದು ಧರ್ಮವಂತರಾದರೂ ಸಾಕು. ಆದ್ದರಿಂದ ನೂತನ ಗುರು ಪೀಠಗಳವರು ಕೆಲವೊಂದು ಸೂತ್ರಗಳನ್ನು ಅನುಸರಿಬೇಕು.

1. ರಾಜಕೀಯ ವ್ಯಕ್ತಿಗಳ ಕೈಗೊಂಬೆಗಳಾಗಬಾರದು.
2. ಜಾತಿ ಜನರಿಗೆ ಹಿಂಸೆ ಕೊಟ್ಟು ತಲೆಗಂದಾಯ ವಸೂಲಿ ಮಾಡಬಾರದು.
3. ಅವರವರ ಜಾತಿಗಳವರಿಗೆ ಧಾರ್ಮಿಕ ಸಂಸ್ಕಾರ, ಮಂತ್ರೋಪದೇಶ ಮಾಡುವ ಕಾರ್ಯಕ್ರಮ ರೂಪಿಸಬೇಕು.
4. ಮಠ ಹಿಡಿದುಕೊಂಡು ಕೂಡದೆ ಸಮಾಜ ಬಾಂಧವರು ಇರುವ ಊರುಗಳಿಗೆ ತೆರಳಿ ಅವರಿಗೆ ಉತ್ತಮ ನೈತಿಕ, ಧಾರ್ಮಿಕ ಸಂಸ್ಕಾರ ಹೊಂದಲು ಬೋಧನೆ ಮಾಡಬೇಕು. ಅಂದರೆ ಗುರು ಪೀಠಗಳ ಸ್ಥಾಪನೆಯ ಉದ್ದೇಶ ಸಾರ್ಥಕ ವಾಗುವುದು.

–ಮಾತಾಜಿ.

ಕಲ್ಯಾಣ ಕಿರಣ – ಕಟ್ಟು ನಿಟ್ಟಿನ ಕ್ರಮ

1970ರ ಜನವರಿ 14ರಂದು ಕಲ್ಯಾಣ ಕಿರಣ ಮಾಸಪತ್ರಿಕೆ ಆರಂಭವಾಯಿತು. ಆಗ ವಾರ್ಷಿಕ ಚಂದಾ 10ರೂ, ಆಜೀವ ಸದಸ್ಯತ್ವ 100ರೂ ಇತ್ತು. ನಂತರ ಆಜೀವ ಸದಸ್ಯತ್ವ ನಿಧಾನವಾಗಿ ಏರುತ್ತ ಬಂದಿತು. ಆದರೆ ನಾವು ಓದುಗರೊಡನೆ ಸಂಪರ್ಕ ಇರಿಸಿಕೊಳ್ಳಲೋಸುಗ ಕಲ್ಯಾಣ ಕಿರಣವನ್ನು 100ರೂ ಕೊಟ್ಟವರಿಗೂ 42 ವರ್ಷ ಕಳಿಸಿದ್ದೇವೆ. ಆರ್ಥಿಕ ನಷ್ಟ ಬಹಳವಾಗುತ್ತಿರುವ ಕಾರಣ ಈಗ 5 ವರ್ಷಗಳ ಹಿಂದಿನ ಆಜೀವ ಸದಸ್ಯರಿಗೆ ಅವರು ನವೀಕರಿಸದಿದ್ದರೆ ಕಲ್ಯಾಣ ಕಿರಣ ಕಳಿಸುವುದನ್ನು ನಿಲ್ಲಿಸಲಾಗುವುದು. ಇನ್ನು ಮುಂದೆ ಆಜೀವ ಸದಸ್ಯತ್ವ ತೆಗೆದುಕೊಳ್ಳದೆ ಕೇವಲ 5 ವರ್ಷಗಳ ಸದಸ್ಯತ್ವ ಮಾತ್ರ ತೆಗೆದುಕೊಳ್ಳಲಾಗುವುದು. ಏಕೆಂದರೆ ಸಾಮಗ್ರಿಗಳ ಬೆಲೆ ಗಗನಕ್ಕೆ ಏರುತ್ತಿದೆ. ಕೆಲವರು ದಾನಿಗಳಿಗೆ ಗೌರವ ಚಂದಾದಾರರನ್ನಾಗಿ ಮಾಡಿಕೊಂಡು ಉಚಿತವಾಗಿ ಪತ್ರಿಕೆ ಕಳಿಸಲಾಗುತ್ತಿತ್ತು. ಅವರೂ ಸಹ ಈಗ ಚಂದಾ ತುಂಬಿದರೆ ಒಳ್ಳೆಯದು.

ಈ ಸೂಚನೆಯನ್ನು ಜನವರಿ ಕಲ್ಯಾಣ ಕಿರಣದಲ್ಲಿ ಕೊಡಲಾಗಿದ್ದು, ಅನೇಕರು ಶರಣ ಮೇಳದಲ್ಲಿ ನವೀಕರಿಸಿದ್ದಾರೆ. ಅವರಿಗೆ ಈ ಸೂಚನೆ ಅನ್ವಯವಾಗುವುದಿಲ್ಲ.

ವಿಶೇಷ ಸೂಚನೆ :

ಬಸವ ಧರ್ಮ ಪೀಠದ ಅಂಗ ಸಂಸ್ಥೆಗಳಿರುವಲ್ಲಿ ಹಣ ತುಂಬಿ, ನಮಗೆ ರಸೀತಿಯ ಜೆರಾಕ್ಸ್ ಪ್ರತಿಯೊಡನೆ ಪೂರ್ಣ ವಿಳಾಸವನ್ನು ಕಳಿಸಿರಿ. ನಿಮ್ಮ ಪತ್ರದಲ್ಲಿ ನಿಮ್ಮ ಜಂಗಮ ದೂರವಾಣಿ (ಮೊಬೈಲ್) ಸಂಖ್ಯೆಯನ್ನು ತಿಳಿಸಿರಿ.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, #2035, 20ನೇ ಮುಖ್ಯರಸ್ತೆ
2ನೇಬ್ಲಾಕ್, ರಾಜಾಜಿನಗರ, ಬೆಂಗಳೂರು–10

ಬಸವ ಧರ್ಮ ಪೀಠ(ರಿ.)
ಮಹಾಮನೆ ಮಹಾಮಠ, ಶರಣಲೋಕ
ಕೂಡಲ ಸಂಗಮ ಸುಕ್ಷೇತ್ರ –587115
ತಾ–ಹುನಗುಂದ, ಜಿ–ಬಾಗಲಕೋಟೆ

ವಾರ್ಷಿಕ ಚಂದಾ 200ರೂ, ಪಂಚ ವಾರ್ಷಿಕ ಚಂದಾ 1000ರೂ.

ಯಾವುದೇ ವಿಷಯಕ್ಕೆ ಪತ್ರ ಬರೆದರೂ ಪೂರ್ಣ ವಿಳಾಸ ಮತ್ತು ದೂರವಾಣಿ ಸಂಖ್ಯೆ ಬರೆಯಿರಿ.

ಭಾಗ –39 - ಮಾತಾಜಿ

ಬಸವ ವಚನಾಮೃತ

746. ಬಹುದೇವತೋಪಾಸನೆ ಬಗ್ಗೆ ಕೋಪ

ನೀನಲ್ಲದನ್ಯ ದೈವ ಉಂಟೆಂಬವನ ಬಾಯ
ಕೆನ್ನೆವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯಾ,
ಎನ್ನ ಕೋಪವಡಗದಯ್ಯಾ!
ಎನ್ನ ಬಿನ್ನಪವನವಧರಿಸು, ಲಿಂಗದೇವಾ. –ಬವದೀ 748

"ಲಿಂಗದೇವಾ ನಿನ್ನ ಹೊರತು, ಅನ್ಯ ದೈವ ಉಂಟು ಎಂದು ನಂಬುವವನ, ಪೂಜಿಸುವವನ ಬಾಯಿಯನ್ನು ಕೆನ್ನೆ ಹರಿಯುವಂತೆ ಸೀಳದಿದ್ದರೆ ನನ್ನ ಕೋಪ ಶಮನವಾಗದು, ಮುನಿಸು ಅಡಗದು, ನನ್ನ ವಿನಂತಿಯನ್ನು ಮನ್ನಿಸು". ಅತ್ಯಂತ ಶಾಂತ ಮೂರ್ತಿಯಾದ ಗುರು ಬಸವಣ್ಣನವರಿಗೆ ಬಹುದೇವತೋಪಾಸಕರನ್ನು, ಏಕದೇವ ವಿಶ್ವಾಸವಿಲ್ಲದವರನ್ನು ಕಂಡು ವಿಪರೀತ ಕೋಪ ಬರುತ್ತಿದೆ. ಏಕೆಂದರೆ ಬಹುದೇವತೋಪಾಸನೆ ಸೃಷ್ಟಿಕರ್ತನಿಗೆ ಅಪಮಾನ ಮಾಡುವ ಆರಾಧನೆ ಮಾತ್ರವಲ್ಲದೆ ಎಲ್ಲ ಮೂಢನಂಬಿಕೆಗೂ ಹೆದ್ದಾರಿ.

747. ಧೈರ್ಯವಂತಿಕೆ

ಆರು ಮುನಿದು ನಮ್ಮನೇನ ಮಾಡುವರು?
ಊರು ಮುನಿದು ನಮ್ಮನೆಂತು ಮಾಡುವರು?
ನಮ್ಮ ಕುನ್ನಿಗೆ ಕೂಸ ಕೊಡಬೇಡ
ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ!
ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಲಿಂಗದೇವಯ್ಯನುಳ್ಳಕ್ಕರ? –ಬವದೀ 749

ರೂಢಿಗೊಂಡ ವ್ಯವಸ್ಥೆಗೆ ಪ್ರತಿಯಾಗಿ ಹಲವಾರು ತತ್ತ್ವ ನಂಬಿಕೆ ಮತ್ತು ಆಚರಣೆಗಳನ್ನು ಗುರು ಬಸವಣ್ಣನವರು ಬೋಧಿಸುತ್ತಿದ್ದುದರಿಂದ ಸಂಪ್ರದಾಯಸ್ಥರು ಅವರನ್ನು ವಿರೋಧಿಸುತ್ತಿದ್ದರು. ಒಮ್ಮೆ ಸಾಮಾಜಿಕ ಬಹಿಷ್ಕಾರ ಹಾಕಿರಲೂ ಸಾಕು. ಅಂಥ ಸನ್ನಿವೇಶದಲ್ಲಿ ಬರೆಯಲ್ಪಟ್ಟ ವಚನವಿರುವಂತೆ ತೋರುತ್ತದೆ. "ಯಾರು ಕೋಪಗೊಂಡು ನಮ್ಮನ್ನು ಏನು ಮಾಡುವರು? ಇಡೀ ಊರಿಗೆ ಊರೇ ಮುನಿದರೂ ಅದು ನಮ್ಮನ್ನೇನು ಮಾಡೀತು? ನಮ್ಮ ಹುಡುಗನಿಗೆ (ಕುನ್ನಿಗೆ) ಹೆಣ್ಣು ಕೊಡಲಿಕ್ಕಿಲ್ಲ; ನಮ್ಮ ಮನೆಯ ನಾಯಿಗೆ ಸಹಿತ ಬಹಿಷ್ಕಾರ ಹಾಕಿ ಒಂದು ತುತ್ತು ಅನ್ನ ಕೊಡದಿರಬಹುದು. ಆನೆಯ ಮೇಲೆ ಹೋಗುವವನನ್ನು ಕೆಳಗೆ ನಿಂತು ಬೊಗಳುವ ನಾಯಿ ಕಚ್ಚಬಲ್ಲುದೆ? ನನಗೆ ಎಲ್ಲಿಯವರೆಗೆ ಲಿಂಗದೇವನ ಅನುಗ್ರಹವಿರುವುದೋ ಅಲ್ಲಿಯವರೆಗೆ ಮಾನವರು ಏನೂ ಮಾಡಲಾರರು. ಸತ್ಯ ಎಂಬ ಆನೆಯ ಬೆನ್ನೇರಿ ಹೋಗುವವನನ್ನು ಜಡ ಸಂಪ್ರದಾಯದ ನಾಯಿ ಕಚ್ಚಬಲ್ಲುದೆ?" ಗುರು ಬಸವಣ್ಣನವರು ಈ ವಚನದಲ್ಲಿ ಅತೀವ ಆತ್ಮವಿಶ್ವಾಸವನ್ನು ಅಭಿವ್ಯಕ್ತಗೊಳಿಸಿದ್ದಾರೆ.

748. ನ್ಯಾಯ ನಿಷ್ಠುರತ್ವ

ನ್ಯಾಯ ನಿಷ್ಠುರಿ ದಾಕ್ಷಿಣ್ಯಪರನು ನಾನಲ್ಲ.
ಲೋಕವಿರೋಧಿ ಶರಣನಾರಿಗಂಜುವನಲ್ಲ
ಲಿಂಗದೇವರ ರಾಜತೇಜದಲ್ಲಿಪ್ಪೆನಾಗಿ –ಬವದೀ 750

"ನಾನು ನ್ಯಾಯಕ್ಕೆ ಬದ್ಧನಾದವನು. ದಾಕ್ಷಿಣ್ಯಕ್ಕೆ ಒಳಗಾಗಿ ಪಕ್ಷಪಾತ ಮಾಡುವವನಲ್ಲ, ಸುಳ್ಳು ಹೇಳುವವನಲ್ಲ, ಇಡೀ ಜಗತ್ತೇ ವಿರೋಧಿಸಿದರೂ ಚಿಂತೆಯಿಲ್ಲ ಸತ್ಯವನ್ನು ಎತ್ತಿ ಹಿಡಿಯುವವನೇ

ವಿನಾ ಯಾರಿಗೂ ಅಂಜುವವನಲ್ಲ, ಏಕೆಂದರೆ ನಾನು ಲಿಂಗದೇವನ ಕೃಪೆಯ ರಾಜಾಶ್ರಯದಲ್ಲಿ ಇದ್ದೇನೆ." ಈ ವಚನದಲ್ಲಿ ಸಹ ದೇವರ ಅನುಗ್ರಹದ ಶಕ್ತಿಯಲ್ಲಿ ಅಪೂರ್ವವಾದ ವಿಶ್ವಾಸ ವ್ಯಕ್ತವಾಗಿದೆ.

749. ಬಿಜ್ಜಳನ ಭಂಡಾರವೆನಗೇತಕೆ?

ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು
ಓರೆಯಾವಿನ ಬೆನ್ನಲಿ ಹರಿಯಲದೇಕಯ್ಯಾ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ನಮಗೆ ಲಿಂಗದೇವರುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ? –ಬ.ವ.ದೀ 751

"ಊರಿನ ಮುಂದೆ ಸಿಹಿಯಾದ ಹಾಲಿನ ಹಳ್ಳ ಹರಿಯುತ್ತಿರಲು ಯಾರಾದರೂ ಒದೆಯುವ ಆಕಳಿನ ಬೆನ್ನುಹತ್ತುವರೆ? ನಾಚಿಕೆ ಬಿಡಲೇಕೆ? ಸಂಕೋಚ ಬಿಡಲದೇಕೆ? ನಮಗೆ ಸೃಷ್ಟಿಕರ್ತ ಲಿಂಗದೇವನ ಅನುಗ್ರಹವಿರುವಾಗ ಬಿಜ್ಜಳನ ಭಂಡಾರವನ್ನು ನಾನೇಕೆ ಉಪಯೋಗಿಸಿಕೊಳ್ಳಲಿ"? ರಾಜಕೀಯ ಕ್ಷೇತ್ರದಲ್ಲಿ ಒಂದು ಉನ್ನತ ಹುದ್ದೆಯಲ್ಲಿದ್ದಾಗ ವಿರೋಧಿಗಳಿಂದ, ಮತ್ಸರಿಗರಿಂದ ಬಗೆ ಬಗೆಯ ಆರೋಪ ಬರುವುದು ಬಲು ಸಹಜ. ಹಾಗೆ ಒಮ್ಮೆ ಭಂಡಾರ ದುರುಪಯೋಗದ ಆರೋಪವನ್ನು ವಿರೋಧಿಗಳು ಹೊರಿಸಿದಾಗ ಇದಕ್ಕೆ ಸೂಕ್ತ ಉತ್ತರವನ್ನು ಈ ವಚನದ ಮೂಲಕ ಗುರು ಬಸವಣ್ಣನವರು ನೀಡಿದ್ದಾರೆ.

750.ತ್ಯಜಿಸಿದುದನ್ನು ಸ್ವೀಕರಿಸಬಾರದು

ಹೋಗಬಿಟ್ಟು, ಮರಳಿ ಹಿಂದೆ ನೋಡಿ
ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ
ಅದೆ ಪರದ್ವಾರ ನಾಯಕನರಕ, ತಪ್ಪದು!
ಅನ್ಯವಧುವೆಂಬುದು ನಿಮ್ಮ ರಾಣಿವಾಸ,
ಇದೇ ದಿಬ್ಯ ಲಿಂಗದೇವಾ. –ಬ.ವ.ದೀ749

ಒಮ್ಮೆ ತ್ಯಾಗ ಮಾಡಿ, ಪತ್ನಿಯನ್ನು ತೊರೆದು ಸನ್ಯಾಸವನ್ನು (ಜಂಗಮ ದೀಕ್ಷೆಯನ್ನು) ಸ್ವೀಕರಿಸಿದ ನಂತರ ಪುನಃ ಹಿಂದಕ್ಕೆ ಎಳಸಿ ಪತ್ನಿಯೊಡನೆ ಸಂಬಂಧವಿರಿಸಿಕೊಂಡರೆ ಅದು ಪರಸ್ತ್ರೀಯನ್ನು ಬೆರೆಸಿದಂತೆ ಆಗುವುದು. ಇದಕ್ಕೆ ನಾಯಕ ನರಕ ಪ್ರಾಪ್ತಿಯಾಗುವುದು. ಪರಸ್ತ್ರೀಯನ್ನು ದೇವರ ಪತ್ನಿ ಎಂದು ಭಾವಿಸಬೇಕು. ಹಾಗೆ ತಿಳಿಯುವುದೇ ದಿವ್ಯವಾದುದು.

751. ಶರಣನ ಪರಿ

ಕಂಡುದಕ್ಕೆ ಎಳಸೆ ಎನ್ನ ಮನದಲ್ಲಿ, ನೋಡಿ ಸೋಲನೆನ್ನ ಕಣ್ಗಳಲ್ಲಿ
ಆಡಿ ಹುಸಿಯೆನೆನ್ನ ಜಿಹ್ವೆಯಲ್ಲಿ
ಲಿಂಗದೇವಾ, ನಿಮ್ಮ ಶರಣರ
ಪರಿ ಇಂತುಟಯ್ಯಾ –ಬ.ವ.ದೀ750

ಚೆಂದ ಕಂಡುದಕ್ಕೆ ಮನದಲ್ಲಿ ಕೂಡ ಆಸೆ ಪಡೆನು. ಕಣ್ಣಿಗೆ ಸುಂದರವಾಗಿ ಕಾಣುವ ಏನನ್ನಾಗಲಿ ನೋಡಿ ಸೋಲುವುದಿಲ್ಲ. ಒಮ್ಮೆ ನಾಲಿಗೆಯಿಂದ ನುಡಿದ ಬಳಿಕ ಅದನ್ನು ಸುಳ್ಳು ಎನ್ನುವುದಿಲ್ಲ. ಲಿಂಗದೇವಾ, ನೀ ಸಾಕ್ಷಿಯಾಗಿ ಶರಣನ ಸ್ಥಿತಿ ಹೀಗಿರುತ್ತದೆ. ಶರಣರದು ನೈತಿಕ ಮೌಲ್ಯಗಳಲ್ಲಿ ಅಪಾರ ವಿಶ್ವಾಸವಿಟ್ಟ ಮನಸ್ಸು. ಶಾರೀರಿಕವಾಗಿ ಮುಂದುವರಿಯುವುದಿರಲಿ ಮನದಲ್ಲಿ ಸಹ ಅವನು ಪಾಪ ಮಾಡಲು ಬಯಸುವುದಿಲ್ಲ, ಸುಂದರವಾಗಿ ಕಾಣುವುದನ್ನು ನೋಡಿ ಮಾನಸಿಕವಾಗಿ ಸಹಿತ ಆಸೆ ಪಡುವುದಿಲ್ಲ. ಸತ್ಯವಾದಿಯಾದ ಅವನು ಎಂಥಾ ಪ್ರಸಂಗದಲ್ಲೂ ತಾನು ಆಡಿದ ಮಾತನ್ನು ಹೆದರಿಯೋ, ದಾಕ್ಷಿಣ್ಯಕ್ಕೊಳಗಾಗಿಯೋ ಸುಳ್ಳು ಎನ್ನುವುದಿಲ್ಲ. ಇದೇ ಶರಣನ ನಿಲುವು!

752.ಲಾಂಛನಕ್ಕೆ ಶರಣೆಂಬೆ

ಅಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ!
ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದಡೆ, ಲಿಂಗದೇವಾ
ನೀ ಸಾಕ್ಷಿಯಾಗಿ 'ಛೀ' ಎಂಬೆನು. –ಬ.ವ.ದೀ 751

ಹಸಿದವನಿಗೆ ಉಣಲಿಕ್ಕುವೆ, ಬಾಯಾರಿದವನಿಗೆ ನೀರುಕೊಡುವೆ. ಅವನು ಹಾಕಿದ ಲಾಂಛನಕ್ಕೆ ಗೌರವ ಸಲ್ಲಿಸುವೆ. ಆದರೆ ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದರೆ ಲಿಂಗದೇವನ ಸಾಕ್ಷಿಯಾಗಿ ಛೀ ಎಂದು ದೂರೀಕರಿಸುವೆ. ಹಸಿದವರು, ಬಾಯಾರಿದವರು ಯಾರೇ ಆಗಲಿ, ಎಂಥವರೇ ಇರಲಿ ಅವರ ಆಪ್ಯಾಯನಕ್ಕೆ ನೀಡಬೇಕು, ವ್ಯಕ್ತಿಗೆ ಗೌರವ ನೀಡುವ ಶಿಷ್ಟಾಚಾರದ ಬೆಳೆಸಿಕೊಳ್ಳಬೇಕು. ಆದರೆ ಅವರು ಧರಿಸಿದ ಲಾಂಛನಕ್ಕೆ ತಕ್ಕ ಆಚರಣೆ ಇಟ್ಟುಕೊಂಡಿರದಿದ್ದರೆ ಅವರನ್ನು ಪುರಸ್ಕರಿಸದೆ ದೂರವಿಡಬೇಕು.

753. ಕಾಯಕ ಜೀವಿ ಪರಮ ಶ್ರೇಷ್ಠ

ಮಾಡುವ ನೀಡುವ ಭಕ್ತನ ಕಂಡಡೆ
ನಿಧಿ ನಿಧಾನವ ಕಂಡಂತಾಯಿತ್ತು,
ಪಾದೋದಕ ಪ್ರಸಾದವ ಜೀವಿಯ ಕಂಡಡೆ
ಹೋದ ಪ್ರಾಣ ಬಂದಂತಾಯಿತ್ತು
ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ
ಅಚ್ಚ ಶರಣರ ಕಂಡಡೆ
ನಿಶ್ಚಯವಾಗಿ ಲಿಂಗದೇವಯ್ಯನೆಂಬೆನು. –ಬವದೀ 755

ಪ್ರಾಮಾಣಿಕವಾಗಿ ಕಾಯಕ ಮಾಡುವ, ದಾಸೋಹದ ಮೂಲಕ ಇನ್ನೊಬ್ಬರಿಗೆ ನೀಡುವ ಭಕ್ತನನ್ನು ನೋಡಿದರೆ ಒಂದು ದೊಡ್ಡ ನಿಧಿಯನ್ನು, ಸಂಪತ್ತನ್ನು ಕಂಡಷ್ಟು ಆನಂದವಾಗುವುದು ಪ್ರತಿನಿತ್ಯ ಇಷ್ಟಲಿಂಗಪೂಜೆ ಮಾಡಿ, ಕರುಣ ಪ್ರಸಾದವನ್ನು ಸ್ವೀಕರಾರ ಮಾಡುವವನನ್ನು ಕಂಡರೆ ಹೋದ ಪ್ರಾಣ ಬಂದಂತಾಯಿತು. ಜನರಲ್ಲಿ ಧರ್ಮಶ್ರದ್ಧೆ ಇಲ್ಲದಿರುವಿಕೆ ಕಂಡು ಪ್ರಾಣವೇ ಹೋಗುವಂತಹ ವಾತಾವರಣವಿರುವಾಗ ಧರ್ಮವಂತನೂ, ದೇವಭಕ್ತನೂ, ಪೂಜಾನಿಷ್ಠನೂ ಆದವನನ್ನು ನೋಡಿದಾಗ ಹೋದ ಪ್ರಾಣ ಬಂದಂತೆ ಆಗುವುದು. ಇನ್ನೊಬ್ಬರ ಮನೆಗೆ ಹೋಗಿ ಪರಾವಲಂಬಿಯಾಗಿ ಕಾಲ ಹರಣ ಮಾಡುತ್ತ ತನ್ನ ಹೊಟ್ಟೆ ಹೊರೆಯದೆ ಸ್ವಾವಲಂಬಿಯಾಗಿ, ಪರೋಪಕಾರಿಯಾಗಿ, ಕಾಯಕ ದಾಸೋಹ ಜೀವಿಯಾಗಿ ಬಾಳುವ ಅಪ್ಪಟ ಶರಣರನ್ನು ಕಂಡರೆ ನಿಶ್ಚಯವಾಗಿ ಲಿಂಗದೇವನ ಪ್ರತಿರೂಪರೆಂಬೆನು.

754. ಶರಣನು ನಿಸ್ವಾರ್ಥಿ

ಗುರು ಭಕ್ತಿಯ ಮಾಡಬಹುದಲ್ಲದೆ, ಲಿಂಗ ಭಕ್ತಿಯ ಮಾಡಬಾರದು.
ಲಿಂಗ ಭಕ್ತಿಯ ಮಾಡಬಹುದಲ್ಲದೆ, ಜಂಗಮ ಭಕ್ತಿಯ ಮಾಡಬಾರದು
ಜಂಗಮ ಭಕ್ತಿಯ ಮಾಡಬಹುದಲ್ಲದೆ, ಸಮಯ ಭಕ್ತಿಯ ಮಾಡಬಾರದು
ಸಮಯ ಭಕ್ತಿಯ ಮಾಡಬಹುದಲ್ಲದೆ, ಸಮಯ ಸಂತೋಷವ ಮಾಡಬಾರದು
ಇವೆಲ್ಲವ ಮಾಡಬಹುದಲ್ಲದೆ ತನ್ನ ತಾನರಿಯಬಾರದು!
ತನ್ನ ತಾನರಿದಿಹೆನೆಂದು ಅಹಂಕಾರವುಳ್ಳಡೆ ನಿಮ್ಮವರಿಗೆ ದೂರ,
ಎಲೆ ದೇವಾ, ಅನ್ಯಕ್ಕೆ ಆಸೆ ಮಾಡಿದೆನಾದಡೆ ನಿಮ್ಮಾಣೆ,
ನಿಮ್ಮ ಪ್ರಮಥರಾಣೆ! ಲಿಂಗದೇವಾ. –ಬ.ವ.ದೀ.756

ಸಾಕಾರ ರೂಪನಾದ ಗುರುವಿನ ಭಕ್ತಿಯನ್ನು ಮಾಡಬಹುದು; ಸೇವೆಯನ್ನು ಮಾಡಬಹುದು. ಆದರೆ ನಿರಾಕಾರವಾದ ಲಿಂಗದೇವನ ಮೇಲೆ ಮನಸ್ಸು ನಿಲ್ಲಿಸುವುದು ಬಲು ಕಠಿಣ ಲಿಂಗಭಕ್ತಿಯನ್ನು

ಮಾಡಬಹುದು. ಭಿನ್ನ ಭಿನ್ನ ಅಭಿರುಚಿಯುಳ್ಳ ಜಂಗಮರ ಸೇವೆ ಮಾಡಿ, ಅವರನ್ನು ತೃಪ್ತಿಪಡಿಸುವುದು ಇನ್ನೂ ಕಠಿಣ. ಜಂಗಮ ಭಕ್ತಿಯನ್ನೂ ಮಾಡಬಹುದು ಆದರೆ ಸಂದರ್ಭದ ಅಗತ್ಯಕ್ಕನುಸಾರವಾಗಿ ಸೇವೆ ಮಾಡುವದು ಮತ್ತೂ ಕಠಿಣ, ಸಮಯ ಭಕ್ತಿಯನ್ನು ಮಾಡಬಹುದು, ಮಾಡಿಸಿಕೊಂಡವರ ಮನಸ್ಸಂತೋಷಪಡಿಸುವುದು ಬಹುಕಷ್ಟ. ಅವರ ಮನಸ್ಸನ್ನೂ ಸಂತೋಷಗೊಳಿಸಬಹುದು. ತನ್ನ ತಾನಾರೆಂಬುದ ಅರಿಯುವ ಆತ್ಮವಿದ್ಯೆಯನ್ನು ಅಳವಡಿಸಿ ಕೊಳ್ಳುವುದು ಬಹಳ ಕಠಿಣ. ತನ್ನ ತಾನು ಅರಿಯಲೂ ಬಹುದು. ಆದರೆ ಅರಿದೆ ಎಂಬ ಅಹಂಕಾರಕ್ಕೆ ಇಂಬುಕೊಟ್ಟರೆ ಶರಣರಿಗೆ ದೂರವಾಗುವನು. ಆದ್ದರಿಂದ ಗುರು ಬಸವಣ್ಣನವರು ಯಾವುದಕ್ಕೂ ಆಸೆ ಪಡದ ನಿಸ್ವಾರ್ಥಿಯಾಗಿ ಲಿಂಗದೇವನ ಸಾಕ್ಷಿಯಾಗಿ ಬದುಕುವರು.

755. ಸದ್ಭಕ್ತಿಯ ನೀಡೆನಗೆ.

ದಾಸನಂತೆ ತವನಿಧಿಯ ಬೇಡುವನಲ್ಲ;
ಚೋಳನಂತೆ ಹೊನ್ನ ಮಳೆಯ ಕರೆಸೆಂಬವನಲ್ಲ;
ಅಂಜದಿರು! ಅಂಜದಿರು! ಅವರಂದದವ ನಾನಲ್ಲ!
ಎನ್ನ ತಂದೆ ಲಿಂಗದೇವ, ಸದ್ಭಕ್ತಿಯನೆ ಕರುಣಿಸೆನಗೆ. –ಬ.ವ.ದೀ 757

ದೇವರ ದಾಸಿಮಯ್ಯ ಬೆಲೆಬಾಳುವ ವಸ್ತ್ರವನ್ನೇನೋ ಶಿವನಿಗೆ ಕೊಟ್ಟ. ಆದರೆ ಪ್ರತಿಫಲವಾಗಿ ತವನಿಧಿ–ಅಕ್ಷಯ ಪಾತ್ರೆಯನ್ನು ಪಡೆದ. ಚೋಳರಾಜ ಹೊನ್ನಿನ ಮಳೆಯನ್ನು ಸುರಿಸಲು ಕೇಳಿದ–ಶಿವನು ಪ್ರತ್ಯಕ್ಷನಾದಾಗ. ನಾನು ಅವರಂತೆ ಭಕ್ತಿಯ ದಾನಕ್ಕೆ ಪ್ರತಿಫಲ ಬೇಡುವವನಲ್ಲ. ನಾನೇನು ವರವನ್ನು ಕೇಳಿ ಬಿಡುತ್ತೇನೋ ಎಂದು ಅಂಜಬೇಡ; ಎಲೆ ತಂದೆ ಲಿಂಗದೇವಾ ಸದ್ಭಕ್ತಿಯೊಂದನ್ನು ನನಗೆ ಕರುಣಿಸು ಸಾಕು.

756.ಕೈಲಾಸವ ಹಂಚಿಕೊಳ್ಳಿರಿ.

ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸದರ್ಥರು,
ಲಿಂಗದಲ್ಲಿ ಸೊಮ್ಮು–ಸಂಬಂಧವರಿತ ಸ್ವಾಮಿ ಭೃತ್ಯರೆಲ್ಲರು,
ನಿಮ್ಮ ಬೇಡೆ, ಅಂಜದಿರಿ!
ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು
ಇದು ಕಾರಣ, ಕೂಡಲ ಸಂಗಮದೇವರ ಲೋಕವ
ಹಂಚಿಕೊಳ್ಳಿ ನಿಮನಿಮಗೆ. –ಬವದೀ 758

ಸಮ್ಯಕ್ ಜ್ಞಾನ ಪಡೆದವರು, ದಾನಧರ್ಮ ಮಾಡಿ ಕೈಲಾಸವನ್ನು ಪಡೆದವರು, ಲಿಂಗದ ಪ್ರತಿರೂಪ ಜಂಗಮಕ್ಕೆ ಭೃತ್ಯಭಾವದಿಂದ ಸೇವೆ ಮಾಡಿ ಕೈಲಾಸಕ್ಕೆ ಹೋದವರು ನಿಮ್ಮನ್ನು ಯಾರನ್ನೂ ಬೇಡುವುದಿಲ್ಲ, ನಿಮ್ಮಲ್ಲಿ ಪಾಲುಕೇಳಲು ಬರುವುದಿಲ್ಲ. ನನಗೆ ಮರ್ತ್ಯಲೋಕದಲ್ಲಿ ಮಹಾಗಣಂಗಳುಂಟು ಇಲ್ಲಿ ಸೇವೆ ಮಾಡಲು ಅವಕಾಶ ಉಂಟು. ಆದ್ದರಿಂದ ಕೂಡಲ ಸಂಗಮ ದೇವರ ಕೈಲಾಸ ಲೋಕವನ್ನು ನೀವು ನೀವೇ ಹಂಚಿಕೊಳ್ಳಿರಿ.

ಈ ವಚನದ ಪ್ರಕಾರ ಶರಣನ ಗುರಿ ಕೈಲಾಸ ಲೋಕದಲ್ಲಿ ದೊರೆಯುವ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವಲ್ಲ; ಮರ್ತ್ಯಲೋಕದಲ್ಲಿ ಸೇವೆ ಮಾಡಿ ಶ್ರೀಗಂಧದಂತೆ ಸವೆದು ಲಿಂಗದೇವನಲ್ಲಿ ಉರಿಯುಂಡ ಕರ್ಪೂರದಂತೆ ಲೀನವಾಗುವುದು.

758. ಆಚಾರ ವಂಚನೆ ಸಲ್ಲದು.

ಅಂದಂದಿನ ಹೊಂದಿಗೆಯ ಬಿಂದುಮಾತ್ರದಲಾದ
ಅಂದವ ಕೆಡಿಸಲರಿಯದ ಅಂಧಕರ ನೋಡಾ!
ಸಮರಸವಿಲ್ಲದೆ ನೆರಹಿ ಮಾಡಿ, ಭಕ್ತರಾದೆವೆಂಬವರನೇನೆಂಬೆ?

ಆಚಾರ–ವಂಚಕರ ಎನಗೆ ತೋರದಿರು
ಲಿಂಗದೇವ, ನಿಮ್ಮ ಧರ್ಮ! –ಬವದೀ 759

ಲಿಂಗಾಯತ ಧರ್ಮದ ಸಂವಿಧಾನಕ್ಕೆ ಹೊಂದಿಕೆಯಾಗದ, ವಿರುದ್ಧವಾದ ಕೆಲವು ಆಡಂಬರದ ಪೂಜೆಗಳನ್ನು ಕೆಲವರು ಏರ್ಪಡಿಸುವುದುಂಟು. ಸತ್ಯನಾರಾಯಣ ಪೂಜೆ, ವರದಾ ಶಂಕರ, ನವಗ್ರಹ. ಗಣಪತಿ ಹೋಮ, ಅಯ್ಯಪ್ಪ ವ್ರತ ಇತ್ಯಾದಿ ಇತ್ಯಾದಿ ಅದ್ದೂರಿಯಾಗಿ ಏರ್ಪಡಿಸಿ ಊಟಕ್ಕೆ ಹಾಕುವುದುಂಟು. ಇದು ದಾಸೋಹವಾಗದು. ಇದಕ್ಕೆ ಸ್ವಧರ್ಮದ ಧಾರ್ಮಿಕ ಹಿನ್ನೆಲೆ ಇರದು. ನೆರೆದು ಉಂಡು ಹೋಗುವವರಲ್ಲಿ ಕೇವಲ ಸ್ನೇಹಭಾವವಿರುವುದೇ ವಿನಾ ಧಾರ್ಮಿಕ ಗಣ ಸಂಬಂಧವಿರುವುದಿಲ್ಲ. ಹೀಗೆ ಅಂದಂದಿನ ಹೊಂದಿಕೆಯ ಕೂಟವನ್ನು ಏರ್ಪಡಿಸುವ ಧಾರ್ಮಿಕರು ಅಂಧಕರೇ ಸರಿ, ಭಾಗವಹಿಸಿದವರಲ್ಲಿ ಪರಸ್ಪರ ಧಾರ್ಮಿಕ ಸಾಮರಸ್ಯವಿಲ್ಲದೆ ಕಾರ್ಯಕ್ರಮವು ಆಡಂಬರದ ಪ್ರದರ್ಶನವಾಗಿರುತ್ತದೆ. ಇಂಥ ಡಾಂಭಿಕ ಭಕ್ತರನ್ನು ಗುರು ಬಸವಣ್ಣನವರು ಆಚಾರವಂಚಕರು ಎಂದು ಕರೆಯುತ್ತಾರೆ. ಬೇರೆಯವರನ್ನು ಮೆಚ್ಚಿಸಲು ತನ್ನ ಧರ್ಮಕ್ಕೆ ವಿರುದ್ಧವಾದ ಆಚರಣೆಗಳನ್ನು ಮಾಡುವವರು ಆಚಾರವಂಚಕರಲ್ಲದೆ ಮತ್ತೇನು? ಇಂಥವರನ್ನು ಲಿಂಗದೇವಾ ತೋರದಿರು ಎಂದು ಲಿಂಗದೇವನಲ್ಲಿ ಬೇಡುತ್ತಾರೆ.

759. ಪ್ರಾಣ ದಾಸೋಹ.

ಕಲಿಯ ಕೈಯ ಕೈದುವಿನಂತಿರಬೇಕಯ್ಯಾ,
ಎಲುದೋರೆ ಸರಸವಾಡಿದಡೆ ಸೈರಿಸಬೇಕಯ್ಯಾ,
ರಣದಲ್ಲಿ ತಲೆ ಹರಿದು ಅಟ್ಟೆ ನೆಲಕ್ಕೆ ಬಿದ್ದು
ಬೊಬ್ಬಿಡಲದಕ್ಕೆ ಒಲಿವ ನಮ್ಮ ಲಿಂಗದೇವ. –ಬವದೀ 760

ಶೂರನ ಕೈಯಲ್ಲಿರುವ ಶಸ್ತ್ರವು ಎದುರಾಳಿಗಳನ್ನು ಕೊಚ್ಚಿ ಹಾಕುತ್ತಿರುತ್ತದೆ. ಶೂರನಿಗೆ ಯುದ್ಧವು ಒಂದು ಆಟದಂತೆ. ಅವನು ಸರಸವಾಡಿದಂತೆ ಶತ್ರುಗಳನ್ನು ಕತ್ತರಿಸಿ ಹಾಕುತ್ತಿದ್ದರೆ ಆ ಶಸ್ತ್ರವು ಬೇಸರಿಸಿಕೊಳ್ಳುವುದಿಲ್ಲ. ಅದೇ ರೀತಿ ಶರಣನು ದೇವರ ಕೈಯೊಳಗೆ ಒಂದು ಆಯುಧವಿದ್ದಂತೆ! ಯುದ್ಧದಲ್ಲಿ ತಲೆ ಹರಿದು ಮುಂಡ ನೆಲಕ್ಕೆ ಬಿದ್ದರೂ ಅಂಜದೆ ಜಯಘೋಷ ಮಾಡಿದರೆ ಆ ನಿಷ್ಠೆಗೆ ದೇವನು ಒಲಿಯುವನು.

ಇಲ್ಲಿ ದೃಷ್ಟಾಂತವಿದೆ. ದ್ರಾಷ್ಟಾಂತವನ್ನು ಹೇಳಲಾಗಿಲ್ಲ. ದ್ರಾಷ್ಟಾಂತವೇನೆಂದರೆ ಜೀವನವು ಒಂದು ಯುದ್ಧ ಭೂಮಿ. ಶರಣನೇ ಯೋಧ. ಸತ್ಯ ಸ್ಥಾಪನೆಯ ಗುರಿಗಾಗಿ ಶರಣನು ಹೋರಾಡುವಾಗ ಅವನಿಗೆ ಬಗೆಬಗೆಯ ಕಷ್ಟಗಳು ಎರಗಬಹುದು. ತನು, ಮನ, ಧನಗಳಿಗೆ ತೊಂದರೆ ಬರಬಹುದು. ಕಡೆಗೆ ಪ್ರಾಣಕ್ಕೂ ತೊಂದರೆ ಬರಬಹುದು. ಶರಣನು ಹೆದರಬಾರದು. ತತ್ವಕ್ಕಾಗಿ ಪ್ರಾಣಕೊಡಲಿಕ್ಕೂ ಸಿದ್ಧನಿರಬೇಕು. ಮರಣವೇ ಮಹಾನವಮಿ ಎಂಬ ಉತ್ಸಾಹದಿಂದ ಸಾವನ್ನು ಎದುರಿಸಬೇಕು.

760. ಪ್ರಾಣಶಕ್ತಿಯಿಂದ ಕೂಡುವಿಕೆ.

ಆಸೆ ರೋಷ ಹರುಷಾದಿಗಳೆಂಬ ಕರಣೇಂದ್ರಿಯವ ಮುಟ್ಟಲೀಯದೆ,
ಆಚಾರವ ಶಿವಾಚಾರವ ಮಾಡುವೆ,
ಭಯ–ಭಕ್ತಿಯಿಂದ ತೋರುವೆ, ಮನದಲ್ಲಿ ವಂಚನೆಯಿಲ್ಲದೆ,
ಭಾವಶುದ್ಧ ಪೂಜೆಯ ಮಾಡುವೆ.
ಎನ್ನ ಪ್ರಾಣಶಕ್ತಿಯಿಂದ ಕೂಡುವೆ ಲಿಂಗದೇವರ. –ಬವದೀ 761

ಆಸೆಯಾಗಲಿ, ಕೋಪ–ದ್ವೇಷಗಳಾಗಲಿ, ಅತೀವ ಸಂತೋಷವಾಗಲಿ (ಹರುಷ ಎಂಬಲ್ಲಿ ವಿಷಯ ಎಂಬ ಪದವಿದ್ದರೆ ಅತ್ಯಂತ ಸೂಕ್ತವಾಗುತ್ತದೆ. ಆಸೆ ರೋಷ ವಿಷಯಾದಿಗಳು ಎಂಬ ಪ್ರಯೋಗಕ್ಕೆ ಹೆಚ್ಚು ಅರ್ಥ ಬರುತ್ತದೆ.) ನನ್ನ ಅಂತಃಕರಣಗಳನ್ನು (ಚಿತ್ತ, ಮನ, ಬುದ್ಧಿ, ಅಹಂಕಾರ)ಇಂದ್ರಿಯಗಳನ್ನು (ಕರ್ಮೇಂದ್ರಿಯ ಐದು, ಜ್ಞಾನೇಂದ್ರಿಯ ಐದು) ಮುಟ್ಟಲು ಅವಕಾಶ

ಕೊಡದೇ ನಾನು ಆಚಾರವನ್ನು ಅಳವಡಿಸಿಕೊಳ್ಳುತ್ತೇನೆ. ಭಯ ಭಕ್ತಿಯನ್ನು, ಮನದಲ್ಲಿ ವಂಚನೆ ಇಲ್ಲದ ಪಾರದರ್ಶಕತೆಯನ್ನು ಅಳವಡಿಸಿಕೊಳ್ಳುತ್ತೇನೆ. ಭಾವಶುದ್ಧಿಯಿಂದ ಪೂಜೆಯನ್ನು ಮಾಡುತ್ತೇನೆ. ಯೋಗ ಸಾಧನೆಯಿಂದ ಪ್ರಾಣಶಕ್ತಿಯನ್ನು ಉದ್ದೀಪಿಸಿಕೊಂಡು ಅದರಿಂದಲೇ ಲಿಂಗದೇವನನ್ನು ಕೂಡುತ್ತೇನೆ.

761. ಶರಣನು ಅನುಪಮ.

ಪೂರ್ವಬೀಜ ವಾಯುಪ್ರಾಣಿಯಲ್ಲ,
ಲಿಂಗಪ್ರಾಣಿಯಾ ಶರಣನು.
ಏಕೋಗ್ರಾಹಿ ಭಾವಭೇದವಿಲ್ಲವಾಗಿ
ಮನಃಪ್ರವೇಶಿಯಾ ಶರಣನು.
ನಿಮ್ಮುವ ಪೂಜಿಸಿ ತನುಧರ್ಮವ ಮರೆದು
ನಿಮ್ಮ ಪ್ರತಿಬಿಂಬದಂತಿಪ್ಪ
ಲಿಂಗದೇವಾ, ನಿಮ್ಮ ಶರಣನು. –ಬವದೀ 762

ಶರಣನು ಪೂರ್ವಬೀಜದಂತೆ ತಾಯಿತಂದೆಯರ ಹೊಟ್ಟೆಯಲ್ಲಿ ವಾಯುಪ್ರಾಣಿಯಾಗಿ ಹುಟ್ಟುವನು. ನಂತರ ಗುರುಕರಕಮಲ ಸಂಜಾತನಾಗುವನು. ಮಂತ್ರೋಪದೇಶ ಪಡೆದ ಬಳಿಕ ಮಾಂಸಪಿಂಡವಳಿದು ಮಂತ್ರಪಿಂಡವಾಗುವುದು; ಇಷ್ಟಲಿಂಗ ದೀಕ್ಷೆಯಿಂದ ಲಿಂಗಪ್ರಾಣಿಯಾಗುವನು. ಅವನ ಪ್ರಾಣವೇ ಲಿಂಗವಾಗುವುದು ; ಲಿಂಗದೇವನೇ ಪ್ರಾಣವಾಗುವನು. ದೇವನಿಗಾಗಿಯೇ ಬದುಕುವನು. ಅವನ ಮನವು ದೈವೀಕರಣಗೊಂಡು ಅವನ ನಡೆ–ನುಡಿ ಎಲ್ಲವೂ ಲಿಂಗಮಯವಾಗುವುದು. ಅರ್ಥಾತ್ ದಿವ್ಯವಾಗುವುದು. ಇಷ್ಟಲಿಂಗ ಪೂಜೆಯಿಂದ ತನುಗುಣಗಳೆಲ್ಲವೂ ಹಂತಹಂತವಾಗಿ ಕಳೆದುಕೊಂಡು ಲಿಂಗದೇವನ ಪ್ರತಿಬಿಂಬದಂತೆ ಜೀವಿಸುವ ಶರಣನು ಉಪಮಾತೀತ.

762. ಲಿಂಗಪ್ರಸಾದಿಕ ಅಪರೂಪ

ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯಾ,
ತೃಷೆಯಾಯಿತ್ತೆಂದು ಮಜ್ಜನಕ್ಕೆರೆವರಯ್ಯಾ,
ಹಸಿವು ತೃಷೆ ವಿಷಯಕ್ಕೆ ಬಳಲುವರಯ್ಯಾ!
ಹಸಿವೆಯಾಯಿತ್ತೆಂದು ಅರ್ಪಿತವ ಮಾಡಲಿಲ್ಲ,
ತೃಷೆಯಾಯಿತ್ತೆಂದು ಮಜ್ಜನಕ್ಕೆರೆಯಲಿಲ್ಲ,
ಇದು ಕಾರಣ ಲಿಂಗದೇವರ ಪೂಜಿಸಿ,
ಪ್ರಸಾದವ ಹಡೆವರೊಬ್ಬರೂ ಇಲ್ಲ! –ಬವದೀ. 763

ಸುಪ್ರಭಾತ ಸಮಯದಲ್ಲಿ ಇಷ್ಟಲಿಂಗಾರ್ಚನೆ ಮಾಡಬೇಕು. ಬ್ರಾಹ್ಮೀ ಮುಹೂರ್ತದಲ್ಲಿ (ಬೆಳಗಿನ ಜಾವ 3 ರಿಂದ 6) ಮಾಡುವುದು ಸರ್ವಶ್ರೇಷ್ಠ ; ಸುಪ್ರಭಾತದಲ್ಲಿ (ಬೆಳಗಿನ 6 ರಿಂದ 9) ಮಾಡುವುದು ಪರವಾಗಿಲ್ಲ. ಆದರೆ ಪ್ರಸಾದಿಕರೆನ್ನಿಸಿಕೊಂಡ ಕೆಲವರು ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ ಮಾಡದೆ ಊಟದ ಸಮಯದವರೆಗೆ ಕಾಯುವರು, ಹಸಿವಾಗಿರದಿದ್ದರೆ ಹಸಿವಾಗುವವರೆಗೆ ಕಾಯುವರು. ತ್ರಿಕಾಲ ಲಿಂಗಾರ್ಚನೆ ಮಾಡದಿದ್ದರಷ್ಟೆ ಬೆಳಿಗ್ಗೆ–ರಾತ್ರಿ ಕನಿಷ್ಟ ಎರಡು ಸಲವಾದರೂ ಲಿಂಗಾರ್ಚನೆ ಮಾಡಬೇಕು. ಬಾಯಾರಿಕೆ ತೃಪ್ತಿ ಮಾಡಲೋಸುಗ ಲಿಂಗಕ್ಕೆ ಮಜ್ಜನಕ್ಕೆರೆವರು. ಕೆಲವರು ಸ್ವಾಮಿಗಳು ಬಾಯಾರಿಕೆಯಾದರೆ ನೀರು ಕುಡಿಯಲು ಸಹ ಸ್ನಾನ ಮಾಡುತ್ತಾರೆ. ಯಾಂತ್ರಿಕವಾಗಿ ಪೂಜೆ ಮಾಡಿ ನೀರು ಕುಡಿಯುತ್ತಾರೆ. ಹೀಗೆ ಲಿಂಗಪೂಜೆ ಹಸಿವು–ತೃಷೆಗಳ ತೃಪ್ತಿಗಾಗಿರುವುದೇ ವಿನಾ ಲಿಂಗದೇವನ ಒಲುಮೆಗಾಗಿ ಅಲ್ಲ. ಅದಕ್ಕೆ ಗುರು ಬಸವಣ್ಣನವರು ಹೇಳುತ್ತಾರೆ; "ನಾನು ಹಸಿವಾಯಿತ್ತೆಂದು ಅರ್ಪಿತವ ಮಾಡಲಿಲ್ಲ. ತೃಷೆಯ ತೃಪ್ತಿಗಾಗಿ ಲಿಂಗಕ್ಕೆ ಮಜ್ಜನಕ್ಕೆರೆಯಲಿಲ್ಲ. ನಿಜಲಿಂಗಪೂಜೆ ಎಂದರೆ ಲಿಂಗದೇವರ ಪೂಜಿಸಿ ಅನುಗ್ರಹವನ್ನು ಪಡೆಯುವುದು ; ಇದನ್ನು ಮಾಡುವವರು ದುರ್ಲಭ."

763. ಪೂವಾಶ್ರಯ ನಿರಸನ.

ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ?
ಗುರುಕಾರುಣ್ಯವ ಹಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದಡೆ,
ಗುರುದ್ರೋಹ ಲಿಂಗದ್ರೋಹ ಜಂಗಮದ್ರೋಹ
ಆಚಾರದ್ರೋಹ ಪ್ರಸಾದದ್ರೋಹ.
ಇಂತೀ ಪಂಚಮಹಾಪಾತಕಂಗಳು
ಭಕ್ತಂಗಲ್ಲದೆ ಭವಿಗೆಲ್ಲಿಯದೊ?
ಗುರುವಿದು, ಲಿಂಗವಿದು, ಜಂಗಮವಿದು
ಆಚಾರವಿದು, ಪ್ರಸಾದವಿದೆಂದರಿಯದಿದ್ದಡೆ
ಕುಂಭಿಪಾತಕ ನಾಯಕನರಕ! ಲಿಂಗದೇವಾ –ಬವದೀ. 764

ಮುತ್ತು ನೀರಲ್ಲಿ ಹುಟ್ಟುವುದು. ಸಾಂಪ್ರದಾಯಿಕವಾಗಿ ನಂಬಿದಂತೆ ಸ್ವಾತಿಯ ಹನಿ ಕಪ್ಪೆ ಚಿಪ್ಪಿನಲ್ಲಿ ಬಿದ್ದು ಮುತ್ತು ತಯಾರಾಗುವುದು. ಆದರೆ ಎಂಥಾ ಪ್ರಸಂಗದಲ್ಲಿಯೂ ಮುತ್ತು ಕರಗಿ ನೀರಾಗುವುದಿಲ್ಲ. ಹಾಗೆ ಭವಿಯು ಗುರುಕಾರುಣ್ಯವನ್ನು ಪಡೆದು ಇಷ್ಟಲಿಂಗ ದೀಕ್ಷಾ ಸಂಸ್ಕಾರವನ್ನು ಹೊಂದಿದ ಭಕ್ತನಾದ ಬಳಿಕ ತನ್ನ ಪೂರ್ವಾಶ್ರಯದೊಡನೆ ಬೆರೆಯಬಾರದು. ಏಕೆಂದರೆ ಅವರ ಸಂಸ್ಕಾರ ಬೇರೆ ಇರುವುದು. ಈತನ ಸಂಸ್ಕಾರ ಬೇರೆ ಇರುತ್ತದೆ. (ಇದು ವಿರಕ್ತರಿಗೂ ಅನ್ವಯವಾಗುತ್ತದೆ. ಅವರು ಜಂಗಮ ದೀಕ್ಷೆ ಪಡೆದು ಮಠಾಧಿಪತಿಗಳಾದ ನಂತರ ತಮ್ಮ ಪೂರ್ವಾಶ್ರಯದೊಡನೆ ನಂಟನ್ನು ಹರಿದುಕೊಳ್ಳಬೇಕು.) ಬೆರೆತರೆ ಅದು ಪಂಚಮಹಾಪಾತಕ. ಲಿಂಗಾಯತ ಧರ್ಮದ ಪ್ರಕಾರ ಪಂಚಮಹಾಪಾತಕವೆಂದರೆ ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ, ಆಚಾರ ದ್ರೋಹ, ಪ್ರಸಾದ ದ್ರೋಹ. ಗುರು ಬಸವಣ್ಣನವರ ಆಜ್ಞೆಯನ್ನು ಮೀರಿದ ದ್ರೋಹ ಪ್ರಾಪ್ತವಾಗುತ್ತದೆ. ತಾನು ಲಿಂಗಧಾರಿಯಾಗಿ ಲಿಂಗಧಾರಣೆ ಇಲ್ಲದವರೊಡನೆ ಬೆರೆತರೆ ಅದು ಲಿಂಗದ್ರೋಹವಾಗುತ್ತದೆ. ಲಿಂಗಧಾರಿಗಳ ಸಮೂಹವೇ ಜಂಗಮ. ಆತನ ಒಡನಾಟ ಜಂಗಮದೊಡನೆ ಇರಬೇಕು. ಪೂರ್ವದ ಬಂಧುಗಳೊಡನೆ ಅಲ್ಲ. ಪೂರ್ವಾಶ್ರಯ, ಬಂಧುಗಳ ಆಚಾರವು ಬೇರೆ ಇರುತ್ತದೆ. ದೀಕ್ಷಾವಂತನ ಆಚಾರವೇ ಬೇರೆ ಇರುತ್ತದೆ. ಅವರೊಡನೆ ಬೆರೆಯುವುದರಿಂದ ಆಚಾರಕ್ಕೆ ಚ್ಯುತಿ ಬರುತ್ತದೆ. ಭವಿಯ ಕೈಯಿಂದ ಪ್ರಸಾದವನ್ನು ಸ್ವೀಕರಿಸುವುದರಿಂದ ಪ್ರಸಾದಕ್ಕೂ ಚ್ಯುತಿ ಬರುತ್ತದೆ. ಇಂಥ ಪಂಚ ಮಹಾಪಾತಕಗಳು ಭಕ್ತನಿಗೇ ವಿನಾ ಯಾವುದೇ ಸಂಸ್ಕಾರವನ್ನು ಪಡೆಯದೆ ಇರುವ ಭವಿಗಲ್ಲ. ಆದ್ದರಿಂದ ಭಕ್ತನಾದವನು ಗುರುಲಿಂಗಜಂಗಮ ಆಚಾರ ಪ್ರಸಾದ ಎಂಬ ಪಂಚ ತತ್ವಗಳನ್ನು ಅರಿತು ಅವಕ್ಕೆ ಚ್ಯುತಿ ಬಾರದಂತೆ ನಡೆಯಬೇಕು.

764. ಜಂಗಮ ಪ್ರಸಾದ ಅಮೂಲ್ಯ

ಸೂಳೆಗೆ ಮೆಚ್ಚಿ ಸೂಳೆಯ ಬಂಟರೆಂಜಲ ತಿಂಬುವುದೀ ಲೋಕ.
ಅಡಗ ಮೆಚ್ಚಿ ಸೊಣಗನೆಂಜಲ ತಿಂಬುವುದೀ ಲೋಕವೆಲ್ಲ.
ಲಿಂಗವ ಮೆಚ್ಚಿ ಜಂಗಮಪ್ರಸಾದವ ಕೊಂಬವರ ನೋಡಿ ನಗುವವರ
ಕುಂಭಿಪಾತಕ ನಾಯಕನರಕದಲ್ಲಿಕ್ಕುವ ಲಿಂಗದೇವ. –ಬವದೀ. 765

ಲಿಂಗಾಯತ ಧರ್ಮದಲ್ಲಿ ಗುರು–ಲಿಂಗ–ಜಂಗಮ–ಪ್ರಸಾದಕ್ಕೆ ಬಹಳ ಮಹತ್ವವಿದೆ. ಈ ಪ್ರಸಾದಗಳಲ್ಲಿ ಹಲವು ವಿಧ. ಸಹಜವಾಗಿ ದರ್ಶನ ಪಡೆದಾಗ ಕಲ್ಲು ಸಕ್ಕರೆಯನ್ನೊ ಹಣ್ಣನ್ನೊ ಪ್ರಸಾದವಾಗಿ ಕೊಡುವುದು ಒಂದು ಬಗೆ. ಒಕ್ಕ ಪ್ರಸಾದ, ಮಿಕ್ಕ ಪ್ರಸಾದ ಎಂಬ ವಿಶೇಷ ಪ್ರಸಾದ ಉಂಟು. ಗುರು–ಜಂಗಮರು ಪ್ರಸಾದ ಸ್ವೀಕರಿಸುವಾಗ ಕೈಯೊಡ್ಡಿ ಬೇಡಿ ಸ್ವಲ್ಪ ಪಡೆದು ತಿನ್ನುವುದು ಒಕ್ಕ ಪ್ರಸಾದ. ಅವರ ತಟ್ಟೆಗೆ ಜಾಸ್ತಿ ನೀಡಿ, ಉಳಿಸಿಕೊಂಡು ಅದನ್ನು ಭಕ್ತರು ಹಂಚಿಕೊಂಡು ತಿನ್ನುವುದು

ಮಿಕ್ಕ ಪ್ರಸಾದ. ಗುರು-ಶಿಷ್ಯ, ಜಂಗಮ-ಭಕ್ತ ಇಬ್ಬರ ನಡುವೆ ಅಪಾರ ಭಕ್ತಿ ಸಂಬಂಧ, ವಿಶ್ವಾಸವಿದ್ದಾಗ ಈ ಒಕ್ಕ ಪ್ರಸಾದ, ಮಿಕ್ಕ ಪ್ರಸಾದಕ್ಕೆ ಬೆಲೆ ಇದೆ. ಭಕ್ತನಿಗೆ ಗುರು(ಜಂಗಮ) ಮಾರ್ಗದರ್ಶಕ, ಹಿತೈಷಿ, ಬಂಧು ಇಬ್ಬರ ಭಾಕ್ತಿಕ ಸಂಬಂಧ ಬೆಲೆ ಕಟ್ಟಲಾಗದು. ಹೀಗಾಗಿ ಒಕ್ಕ ಪ್ರಸಾದ, ಮಿಕ್ಕ ಪ್ರಸಾದಕ್ಕಾಗಿ ಸಾಧಕ ಹಂಬಲಿಸುತ್ತಾನೆ. ಈ ನಂಬಿಕೆ ಇಲ್ಲದವರಿಗೆ ಅದು ಪ್ರಸಾದವಲ್ಲ ಎಂಜಲು.

ಇಷ್ಟಲಿಂಗ ಪೂಜೆಯ ನಂತರ ೩ ಬಾರಿ ನೀರೆರೆದು ನಾವು ಸ್ವೀಕಾರ ಮಾಡುತ್ತೇವಲ್ಲವೆ? ಅದನ್ನು ನೋಡಿದ ಒಬ್ಬರು ವೈದಿಕಾನುಯಾಯಿಗಳು ಇದೇನು ಎಂಜಲು ಮಾಡಲಾಗುತ್ತದೆ ಎಂದರು. ತನ್ನ ಕೈಯಲ್ಲಿ ತಾನು ಸ್ವೀಕಾರ ಮಾಡುವ ಇಷ್ಟಲಿಂಗ ತೀರ್ಥವು ಎಂಜಲೆ ? ವೈದಿಕ ಧರ್ಮ ಎಂಜಲು ಮತ್ತು ಮೈಲಿಗೆಯ ಕಲ್ಪನೆಯನ್ನು ವಿಚಿತ್ರವಾಗಿ ಬೆಳೆಸಿದೆ. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮಡೆ ಸ್ನಾನ ಎಂಬ ಅಸಹ್ಯವಾದ ಆಚರಣೆಯಿದೆ. ಬ್ರಾಹ್ಮಣರು ಊಟ ಮಾಡಿ ಬಿಟ್ಟ ಎಂಜಲು ಎಲೆಯ ಮೇಲೆ ಇತರರು ಮುಖ್ಯವಾಗಿ ಕೆಳವರ್ಗದ ಶೂದ್ರರು ಬರೆ ಮೈಯಲ್ಲಿ ಉರುಳು ಸೇವೆ ಮಾಡುತ್ತಾರೆ. ಇಂಥ ಅಸಹ್ಯ ಆಚರಣೆಯನ್ನು ನಿಲ್ಲಿಸಬೇಕು ಎಂದು ವಿಚಾರವಾದಿಗಳು ಹೋರಾಟ ಮಾಡಿದಾಗ ಪೂಜ್ಯ ಪೇಜಾವರ ಶ್ರೀಗಳು, ಮುಸಲ್ಮಾನರಲ್ಲಿಯೂ ಕೆಲವು ಮೂಢನಂಬಿಕೆಗಳಿವೆ. ಅದನ್ನೇಕೆ ಖಂಡಿಸುವುದಿಲ್ಲ ? ಅವರು ದೊಡ್ಡ ತಟ್ಟೆಯಿಟ್ಟು ಅದರಲ್ಲಿ ಕೆಲವರು ಒಟ್ಟಿಗೆ ಊಟ ಮಾಡಿ ಎದ್ದು ಹೋಗುತ್ತಾರೆ. ಮತ್ತೆ ಕೆಲವರು ಬಂದು ಕುಳಿತು ಊಟ ಮಾಡುತ್ತಾರೆ ಎಂದು ಟೀಕಿಸಿದರು. ಮುಸಲ್ಮಾನರಲ್ಲಿ ಸಹೋದರಭಾವ ಪ್ರದರ್ಶಿಸಲು ಈ ರೀತಿ ಮಾಡುತ್ತಾರೆ. ಕೈ ತೊಳೆದುಕೊಂಡು ಉಣ್ಣುತ್ತಾರೆ. ತಮಗೆ ಬೇಕಾದಷ್ಟು ತೆಗೆದುಕೊಳ್ಳುತ್ತಾರೆ. ಉಂಡು ಎದ್ದು ಹೋಗುತ್ತಾರೆ. ತಂದೆ ತಾಯಿ ತಮ್ಮ ಮಕ್ಕಳನ್ನು ಕೂರಿಸಿಕೊಂಡು ಜೊತೆಗೇ ಉಣ್ಣುವುದಿಲ್ಲವೆ? ಪತಿ-ಪತ್ನಿ ಒಂದೇ ತಟ್ಟೆಯಲ್ಲಿ ಉಣ್ಣುವುದಿಲ್ಲವೆ? ಅದರೊಳಕ್ಕೆ ಬಾಯಿಂದ ಎಂಜಲು ಹಾಕಲಾಗುವುದೆ ?

ಮನು ಸ್ಮೃತಿಯ ಪ್ರಕಾರ ಸಾಮೂಹಿಕ ಪ್ರಸಾದ ನಿಷಿದ್ಧ. ಲಿಂಗಾಯತ ಧರ್ಮದಲ್ಲಿ ಸಾಮೂಹಿಕ ಪ್ರಸಾದ-ಗಣ ಪ್ರಸಾದಕ್ಕೆ ಬಹಳ ಪಾವಿತ್ರ್ಯವಿದೆ. ಕೊಟ್ಯಾಧೀಶನ ಮನೆಯ ಭಕ್ಷ-ಭೋಜ್ಯಕ್ಕಿಂತಲೂ ಗುರುಮಠದ ಪ್ರಸಾದಕ್ಕೆ ಹೆಚ್ಚಿನ ಮಹತ್ವವಿದೆ. ಆದ್ದರಿಂದ ಜಂಗಮ ಪ್ರಸಾದವನ್ನು ಎಂಜಲು ಎಂದು ಹಳಿಯುವವರನ್ನು ಕಂಡು ಗುರು ಬಸವಣ್ಣನವರಿಗೆ ಬಲುಕೋಪ. ವೇಶ್ಯೆಯ ಮನೆಗೆ ಹೋಗುವ ವಿಟನು ಆಕೆಯ ಬಂಟರ ಎಂಜಲನ್ನು ತಿನ್ನುವುದಿಲ್ಲವೆ ? ಮಾಂಸವನ್ನು ಬಯಸಿದ ವ್ಯಕ್ತಿ ನಾಯಿಯ ಎಂಜಲನ್ನು ತಿನ್ನುವುದಿಲ್ಲವೆ ? ಮೊಲ ಜಿಂಕೆ ಮುಂತಾದುವನ್ನು ಹಿಡಿಯಲು ನಾಯಿಗಳನ್ನು ಮುಂದೆ ಬಿಡಲಾಗುವುದು. ಅವು ಓಡಿ ಹೋಗಿ ಮೊಲ ಜಿಂಕೆಗಳ ಕುತ್ತಿಗೆಗೆ ಬಾಯಿ ಹಾಕಿ ಹಿಡಿಯುವುವು. ನಂತರ ಅವುಗಳ ಮಾಂಸವನ್ನು ಮನುಷ್ಯರು ತಿನ್ನುವರು. ದೇವರನ್ನು ನಂಬಿದ ಶರಣರು ಇಷ್ಟಲಿಂಗಧಾರಿಗಳಾದ ಗುರು -ಜಂಗಮರ ಹಸ್ತದಿಂದ ಪ್ರಸಾದ ಸ್ವೀಕರಿಸುವರು. ಅದನ್ನು ನೋಡಿ ನಕ್ಕು ವಿಡಂಬಿಸುವವರನ್ನು ಭಯಂಕರ ನರಕದಲ್ಲಿಕ್ಕಿ ಶಿಕ್ಷೆಯನ್ನು ಲಿಂಗದೇವ ನೀಡುವನು. ಗುರು ಜಂಗಮರು ಭಕ್ತರಿಗೆ ನೀಡುವ ಕರುಣ ಪ್ರಸಾದ ಸಮಾನತೆಯ ದ್ಯೋತಕ. ನವ ದೀಕ್ಷಿತರನ್ನು ಸಮಾಜದೊಳಗೆ ಕರೆದುಕೊಳ್ಳುವ ಒಂದು ಧಾರ್ಮಿಕ ವಿಧಿಯು ಅಹುದು.

765. ತ್ರಿವಿಧ ನಿರ್ಣಯ

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?
ಅಪವಿತ್ರದ ನುಡಿಯು ನುಡಿ ಸೂತಕವೆ ಪಾತಕ!
ನಿಷ್ಕಳಂಕ ನಿಜೈಕ್ಯ ತ್ರಿವಿಧ ನಿರ್ಣಯ;
ಲಿಂಗದೇವ ನಿಮ್ಮ ಶರಣರಿಗಲ್ಲದಿಲ್ಲ. —ಬವದೀ. 766

ಇಷ್ಟಲಿಂಗವಿದ್ದೆಡೆಯಲ್ಲಿ ಹೊಲೆಯನ್ನು-ಮೈಲಿಗೆಯನ್ನು ಹುಡುಕಬಾರದು. ರಜೋಸೂತಕವು

ಮುಟ್ಟಾದ ಮಹಿಳೆಯನ್ನು ಬಾಧಿಸದು. ಮುಟ್ಟು ಕಾಣಿಸುತ್ತಿದ್ದಂತೆಯೇ ಸ್ನಾನ ಮಾಡಿಕೊಂಡು ಲಿಂಗತೀರ್ಥವನ್ನು ತಲೆಯ ಮೇಲೆ ಸಿಂಪಡಿಸಿಕೊಂಡು, ನಂತರ ಪೂಜೆಯನ್ನು ಮಾಡಿ ತೀರ್ಥಪ್ರಸಾದವನ್ನು ಸ್ವೀಕಾರ ಮಾಡಿದರೆ ಆಯಿತು ; ಹೊಲೆಯು ಬಾಧಿಸದು. ಇದೇ ಪರಿಕ್ರಮವು ಜನನ ಸೂತಕ, ಮರಣ ಸೂತಕ ನಿವಾರಣೆಗೂ ಉಂಟು. ಕೆಲವರು ಶ್ರದ್ಧಾವಂತರಿರುವರು. ನಿಷ್ಠೆಯಿಂದ ಲಿಂಗಪೂಜೆ ಮಾಡಿ ಅದನ್ನು ಧರಿಸಿಕೊಳ್ಳದೆ ಜಗುಲಿ ಮೇಲೆ ಎತ್ತಿಟ್ಟು ಹೋಗುವರು ಏಕೆ ಎಂದು ಕೇಳಿದರೆ, "ನಾನು ವೈದ್ಯನಿದ್ದೇನೆ. ಎಲ್ಲ ಜಾತಿ-ಮತಗಳವರನ್ನು ಮುಟ್ಟಿ ಚಿಕಿತ್ಸೆ ಮಾಡಬೇಕಾಗುತ್ತದೆ. ಆಗ ಇಷ್ಟಲಿಂಗವು ಮೈಲಿಗೆಯಾಗುತ್ತದೆ. ಬಸ್ಸಿನಲ್ಲಿ ಹೋಗುವಾಗ ಬೇರೆಯವರು ಮುಟ್ಟುತ್ತಾರೆ. ಅದಕ್ಕೇ ಎತ್ತಿಡುತ್ತೇವೆ." ಹೀಗೆಲ್ಲ ಉತ್ತರಿಸುತ್ತಾರೆ. ಇದು ತಪ್ಪು ಕಲ್ಪನೆ. ಬೆಳಕು ಮುಟ್ಟಿದರೆ ಕತ್ತಲೆ ಹರಿಯುವುದೇ ವಿನಾ ಬೆಳಕು ಮಂಕಾಗುವುದಿಲ್ಲ. ಹಾಗೆ ಇಷ್ಟಲಿಂಗಧಾರಿಯಾದವ ನಿಜ ಶರಣನಾಗಿದ್ದರೆ ಅವನ ಸ್ಪರ್ಶದಿಂದ ಇತರರು ಶುದ್ಧವಾಗುವರೇ ವಿನಾ ಇಷ್ಟಲಿಂಗ ಮೈಲಿಗೆಯಾಗುವುದಿಲ್ಲ.

ಕುಲವಳಿದಾಗಲೇ ಜಂಗಮತ್ವ, ಜಂಗಮನು ಜಾತಿ ಪ್ರಜ್ಞೆಯನ್ನು ಕಳೆದುಕೊಳ್ಳಬೇಕು. ಅಲ್ಲಮ ಪ್ರಭುದೇವರು ಹೇಳುವಂತೆ "ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ ಅನುಭಾವವೆಲ್ಲಿಯದೊ?" ಅದೇ ರೀತಿ ಜನರು ಸಹ ಜಂಗಮನಲ್ಲಿ ಪೂರ್ವದ ಜಾತಿಯನ್ನು ಕುಲವನ್ನು ಅರಸಬಾರದು. ಇನ್ನೊಂದು ರೀತಿಯಲ್ಲೂ ಸಹ ಈ ವಾಕ್ಯವನ್ನು ಅರ್ಥಮಾಡಬಹುದು. ವಿವಿಧ ಜಾತಿಮತಪಂಥಗಳವರಿಗೆ ಗುರು-ಜಂಗಮರು ದೀಕ್ಷೆಯನ್ನು ಕೊಡುತ್ತಾರೆ. ನಂತರ ಅವರ ಮನೆಗೆ ಪ್ರಸಾದ ಸ್ವೀಕಾರಕ್ಕೆ ಹೋಗುತ್ತಾರೆ (ಹೋಗಬೇಕು). ಜಂಗಮ ಇದ್ದೆಡೆಯಲ್ಲಿ ಕುಲವು ಅಳಿಯುತ್ತದೆ. ಆದ್ದರಿಂದ ಇನ್ನಿತರ ಸಹಧರ್ಮಿಗಳು ಪೂರ್ವದ ಜಾತಿಯನ್ನು ದೀಕ್ಷಿತರಲ್ಲಿ ಎಣಿಸದೆ ಪ್ರಸಾದ ಸ್ವೀಕಾರ, ಹೆಣ್ಣುಗಂಡು ಕೊಡು-ಕೊಳ್ಳುವ ವ್ಯವಹಾರವನ್ನು ನಿಸ್ಸಂಕೋಚದಿಂದ ಮಾಡಬೇಕು. ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ ? ಪ್ರಸಾದದಲ್ಲಿ ಎಂಜಲು ಎಂಬ ಭಾವ ಇರಬಾರದು. ಲಿಂಗವಿದ್ದಲ್ಲಿ ಹೊಲೆಯನ್ನು ಹುಡುಕುವುದು, ಜಂಗಮದಲ್ಲಿ ಕುಲವನ್ನು ಹುಡುಕುವುದು, ಪ್ರಸಾದದಲ್ಲಿ ಎಂಜಲು ಹುಡುಕುವುದು ಅಪವಿತ್ರದ ನುಡಿ. ಇದೇ ಸೂತಕ ಮತ್ತು ಪಾತಕ. ಆದ್ದರಿಂದ ಈ ಮೂರು ಪರಿಶುದ್ಧ, ನಿಷ್ಕಲಂಕ. ಇದನ್ನು ಶರಣನು ತಿಳಿದಿರುತ್ತಾನೆ.

766. ಭವಭಾರಿಗೆ ಲಿಂಗಪ್ರಸಾದವಿಲ್ಲ.

ಬಾರದು ಬಾರದು, ಭಕ್ತಂಗೆ ಪರಧನ ಪರಸತಿ,
ಬಾರದು ಬಾರದು, ವಿಷಯಿಗೆ ಪಶುಪತಿಯ ವ್ರತವು,
ಬಾರದು ಬಾರದು, ಭವಭಾರಿಗೆ
ಲಿಂಗದೇವನ ಒಕ್ಕುದ ಕೊಳಬಾರದು. —ಬವದೀ. 767

ಭಕ್ತನಾದವನು ಎಂಥ ಪ್ರಸಂಗದಲ್ಲೂ ಪರಧನ ಪರಸತಿಗೆ ಎಳಸುವುದಿಲ್ಲ. ವಿಷಯಾಸಕ್ತನಾದವನು ದೈವೀ ಆಚರಣೆಗಳನ್ನು ಅಳವಡಿಸಿಕೊಳ್ಳುವುದಿಲ್ಲ. ಅದೇ ರೀತಿ ಬರೀ ಭೋಗಾಸಕ್ತಿಯಲ್ಲಿ ತಲ್ಲೀನನಾದ ಲೌಕಿಕನಿಗೆ ನಿತ್ಯ ಲಿಂಗಾರ್ಚನೆ, ಲಿಂಗ ಪ್ರಸಾದ ಲಭ್ಯವಾಗುವುದಿಲ್ಲ.

767. ಪ್ರಸಾದದ ಮಹಿಮೆ.

ಹುತ್ತದ ಮೇಲಣ ರಜ್ಜು ಮುಟ್ಟಿದಡೆ ಸಾವರು ಶಂಕಿತರಾದವರು.
ಸರ್ಪ-ದಷ್ಟವಾದಡೆಯೂ ಸಾಯರು ನಿಶ್ಯಂಕಿತರಾದವರು!
ಲಿಂಗದೇವಯ್ಯ !
ಶಂಕಿತಂಗೆ ಪ್ರಸಾದ ಸಿಂಗಿ ಕಾಳಕೂಟ ವಿಷವು ! —ಬವದೀ. 768

ಶಂಕಿತರಾದವರು ಹುತ್ತದ ಮೇಲೆ ಬಿದ್ದಿರುವ ಪೊರೆಯನ್ನು ಮುಟ್ಟಿದರೂ ಸಾಯುವರು. ಶಂಕೆಗೆ ಒಳಗಾಗದ ಧೈರ್ಯಶಾಲಿಗಳು ಹಾವು ಕಡಿದರೂ ಸಾಯುವುದಿಲ್ಲ. ಧೈರ್ಯ, ಸ್ಥೈರ್ಯಗಳು ಬಹಳ ಮುಖ್ಯ. ಅದೇ ರೀತಿ ದಿವ್ಯ ಜೀವನದ ದಾರಿಯಲ್ಲಿ ಪ್ರಸಾದವು ಬಹುಮುಖ್ಯ. ನಂಬುಗೆಯಿಂದ

ತೆಗೆದುಕೊಂಡವನಿಗೆ ಪ್ರಸಾದವು ಅಮೃತದಂತೆ ; ನಂಬದೆ ಹೋದರೆ ಅದೇ ಭಯಂಕರ ವಿಷವಾಗಿ ಕೊಲ್ಲುವುದು. ಆದ್ದರಿಂದ ಪ್ರಸಾದದಲ್ಲಿ, ದೇವರ ಕಾರುಣ್ಯದಲ್ಲಿ ವಿಶ್ವಾಸವು ಮುಖ್ಯ.

768. ನಂಬಿದರೆ ಪ್ರಸಾದ.

ನಂಬಿದಡೆ ಪ್ರಸಾದ: ನಂಬದಿದ್ದಡೆ ವಿಷವು.
ತುಡುಕಬಾರದು ನೋಡಾ, ಲಿಂಗನ ಪ್ರಸಾದ, ಸಂಗನ ಪ್ರಸಾದ!
ಲಿಂಗದೇವನ ಪ್ರಸಾದ ಸಿಂಗಿ, ಕಾಳಕೂಟ ವಿಷವು. –ಬವದೀ. 769

ಪ್ರಸಾದದ ಜೊತೆ ಸರಸವಾಡಬಾರದು. ನಂಬಿದಡೆ ಪ್ರಸಾದ ಅದು ಅನುಗ್ರಹವನ್ನು ಸಂಪತ್ತನ್ನು ನೀಡುವುದು. ನಂಬದಿದ್ದಡೆ ಆಪತ್ತನ್ನು, ಅವನತಿಯನ್ನು ತರುವುದು. ಆದ್ದರಿಂದ ಪ್ರಸಾದವನ್ನು ವಿಡಂಬಿಸಬಾರದು.

ಬಹಳ ವರ್ಷಗಳ ಹಿಂದಿನ ಮಾತು. ಧಾರವಾಡದಿಂದ ಕೂಡಲಸಂಗಮಕ್ಕೆ ಹೋಗಿದ್ದೆವು. ಹದಿನೈದು ದಿನಗಳ ಅನುಷ್ಠಾನ ಕೈಗೊಂಡಿದ್ದೆ. ನನ್ನ ಜೊತೆ ಮೂವರು ಗೃಹಸ್ಥ ಶರಣೆಯರು ಬಂದಿದ್ದರು. ಅದರಲ್ಲಿ ಒಬ್ಬರು ಪೋಲೀಸ್ ಅಧಿಕಾರಿಯೊಬ್ಬರ ಪತ್ನಿ. ಆತ ತುಂಬಾ ದರ್ಪದ ಮನುಷ್ಯ. ಆಕೆ ಅತೀವ ಮುಗ್ಧೆ. ಅನುಷ್ಠಾನ ಮುಗಿದ ದಿವಸ ಮಲಪ್ರಭಾ ನದಿಯ ದಂಡೆಯ ಮೇಲೆ ಹುಣ್ಣಿಮೆಯ ರಾತ್ರಿಯಲ್ಲಿ ಇಷ್ಟಲಿಂಗಾರ್ಚನೆ ಮಾಡುತ್ತ ಆನಂದಿಸಿದೆ. ಅತೀವ ಆನಂದವಾಗುತ್ತಿತ್ತು. ಪೂಜಾನಂತರ ಎಲ್ಲರಿಗೂ ಕರುಣಪ್ರಸಾದ ಕೊಡಲು ಬಯಸಿದೆ. ಎಲ್ಲರೂ ಪಡೆದರು. ನಿವೃತ್ತ ಪೋಲೀಸ್ ಅಧಿಕಾರಿ ಅಹಂಕಾರದಿಂದ ವರ್ತಿಸಿದ, ಕರುಣ ಪ್ರಸಾದ ಪಡೆಯಲಿಲ್ಲ. ಅವರ ಹೆಂಡತಿ ಗೋಗರೆದಳು. ಆದರೂ ಆತ ತೆಗೆದುಕೊಳ್ಳಲಿಲ್ಲ. ಮುಂದೆ ನಮಗೂ ಅವರಿಗೂ ಸಂಪರ್ಕ ಕಡಿದುಹೋಯಿತು. ಅವರು ಧಾರವಾಡ ಬಿಟ್ಟು ಹೋದರು.

ಹತ್ತಾರು ವರ್ಷಗಳು ಕಳೆದವು. ಒಂದು ದಿನ ಒಬ್ಬ ವ್ಯಕ್ತಿ ಹರಿದುಹೋದ ಬಟ್ಟೆಯುಟ್ಟು ಬಂದು ಸಾಷ್ಟಾಂಗ ಹಾಕಿದರು. ನೀವ್ಯಾರು ಎಂದಾಗ ನನ್ನ ಗುರುತು ಸಿಗಲಿಲ್ಲವೆ ? ಎಂದರು. ಭಿಕ್ಷುಕರಂತೆ ಕಾಣುತ್ತಿದ್ದ. ಹೇಗೆ ಗುರ್ತಿಸಬೇಕು. "ನಾನು........ಇಂಥವನು......" ಎಂದಾಗ ನನಗೆ ಅಚ್ಚರಿಯೋ ಅಚ್ಚರಿ. ಆಗಿನ ದರ್ಪವೆಲ್ಲಿ ಈಗಿನ ದಯನೀಯ ಸ್ಥಿತಿ ಎಲ್ಲಿ ?

"ನಾನು ಎಂದು ಪ್ರಸಾದವನ್ನು ನಿರಾಕರಿಸಿದೆನೋ ಅಂದೇ ನನ್ನ ಅವನತಿ ಪ್ರಾರಂಭವಾಯಿತು. (ಅಕ್ರಮವಾಗಿ) ಗಳಿಸಿದ ಸಂಪತ್ತೆಲ್ಲವೂ ಕರಗಿ ಹೋಯಿತು. ಅಕ್ಷರಶಃ ಬೀದಿ ಪಾಲಾಗಿದ್ದೇನೆ. ಅದಕ್ಕಾಗಿ ಕ್ಷಮೆ ಕೇಳಿ ಪ್ರಸಾದವನ್ನು ಪಡೆದುಕೊಳ್ಳಲು ಬಂದಿದ್ದೇನೆ." ಎಂದು ಹೇಳಿದರು. ಪ್ರಸಾದ ದ್ರೋಹ ಮಾಡಬಾರದು.

769. ಆತ್ಮ ನೈವೇದ್ಯದಿಂದ ಕರ್ಮನಿರಸನ.

ಪಂಡಿತನಾಗಲಿ, ಮೂರ್ಖನಾಗಲಿ,
ಸಂಚಿತಕರ್ಮ ಉಂಡಲ್ಲದೆ ಬಿಡದು?
ಪ್ರಾರಬ್ಧಕರ್ಮ ಭೋಗಿಸಿದಲ್ಲದೆ ಹೋಗದೆಂದು
ಶ್ರುತಿ ಸಾರುತ್ತೈದಾವೆ, ನೋಡಾ;
ತಾನಾವ ಲೋಕದೊಳಗಿದ್ದಡೆಯೂ ಬಿಡದು,
ಕರ್ಮಫಲಗೂಡಿ ಲಿಂಗದೇವಂಗೆ
ಆತ್ಮ ನೈವೇದ್ಯವ ಮಾಡಿದವನೆ ಧನ್ಯ. –ಬವದೀ. 770

ಗುರು ಬಸವಣ್ಣನವರು ಕರ್ಮಸಿದ್ಧಾಂತವನ್ನು ಒಪ್ಪಿದ್ದಾರೆ ಎನ್ನುವುದಕ್ಕೆ ಪ್ರಸ್ತುತ ವಚನವು ಉತ್ತಮ ಉದಾಹರಣೆ. ಒಬ್ಬ ವಿದ್ವಾಂಸನೇ ಇರಲಿ, ದಡ್ಡನೇ ಇರಲಿ ಅವನು ಈ ಹಿಂದೆ ಹಿಂದಿನ ಜನ್ಮದಲ್ಲಾದರೂ ಇರಬಹುದು ಅಥವಾ ಈ ಜನ್ಮದಲ್ಲಿ ಇಲ್ಲಿಯವರೆಗೆ, ಅವನು ಮಾಡಿದ ಕರ್ಮವು ಸಂಚಿತ ಕರ್ಮವಾಗಿ ಸಂಗ್ರಹವಾಗಿರುತ್ತದೆ. ಇದು ಕಟ್ಟಿಕೊಂಡ ಬುತ್ತಿಯಂತೆ. ಅದನ್ನು ಅವನು

ಉಣ್ಣಲೇಬೇಕು. ಕರ್ಮಗಳಲ್ಲಿ ಮೂರು ಬಗೆ ಸಂಚಿತ, ಪ್ರಾರಬ್ಧ, ಆಗಾಮಿ ಎಂದು. ಸಂಚಿತ ಎಂದರೆ ಈ ವರೆಗೆ ಸಂಗ್ರಹವಾದುದು. ಪ್ರಾರಬ್ಧ ಕರ್ಮವೆಂದರೆ ಈಗ ಉಣ್ಣುತ್ತಿರುವುದು, ಆಗಾಮಿ ಎಂದರೆ ಅನುಭವಿಸಲು ಉಳಿದಿರುವುದು ಮತ್ತು ಮುಂದೆ ಸಂಗ್ರಹಿಸಿಕೊಳ್ಳುವಂತಹುದು. ಸಂಚಿತದ ಒಂದು ಭಾಗವಾದ ಪ್ರಾರಬ್ಧ ಕರ್ಮವನ್ನು ಅನುಭವಿಸಿದಲ್ಲದೆ ಅದು ನಿರ್ಮೂಲವಾಗದು. ಈ ರೀತಿ ಶಾಸ್ತ್ರಗಳು ಒಕ್ಕೊರಲಿನಿಂದ ಸಾರುತ್ತವೆ. ಈ ಕರ್ಮಫಲವನ್ನು ದೇವರಿಗೆ ಸಮರ್ಪಿಸಿ ತನ್ನನ್ನು ತಾನು ಸಮರ್ಪಣೆ ಮಾಡಿಕೊಂಡವನು ಧನ್ಯನೂ ಮುಕ್ತಾತ್ಮನೂ ಆಗುತ್ತಾನೆ.

ಕೆಲವು ಪಾಪಿಗಳು ಮೊದಲಿನ ಜೀವನದಲ್ಲಿ ಮಾಡಬಾರದ ಕರ್ಮಗಳನ್ನು ಮಾಡಿದವರು ಪರಿವರ್ತನೆಗೊಂಡು ಸಂತರಾಗುತ್ತಾರೆ. ಅವರು ತಾವು ಮಾಡಿದ ಕುಕರ್ಮಗಳ ಫಲವನ್ನು ಅನುಭವಿಸಲೇ ಇಲ್ಲವಲ್ಲ ಎಂದು ಕೆಲವರು ಪ್ರಶ್ನಿಸುತ್ತಾರೆ. ಅವರಿಗೆ ಈ ವಚನ ವಾಕ್ಯದಲ್ಲಿ ಉತ್ತರವಿದೆ. ಒಬ್ಬ ಅಪರಾಧಿಗೆ ಮರಣದಂಡನೆಯಾಗಿದೆ ಎಂದುಕೊಳ್ಳುವಾ. ಕೆಳಗಿನ ಕೋರ್ಟ್‌ನಲ್ಲಿ ಆದ ಈ ಶಿಕ್ಷೆಯನ್ನು ಮೇಲಿನ ಕೋರ್ಟ್ ಉನ್ನತ ನ್ಯಾಯಾಲಯ, ಸುಪ್ರೀಂ ಕೋರ್ಟ್ ಸಹ ಎತ್ತಿ ಹಿಡಿದಿದೆ. ಇನ್ನು ಅವನಿಗೆ ಒಂದೇ ಒಂದು ದಾರಿ ಇದೆ. ಅದೇ ರಾಷ್ಟ್ರಪತಿಯವರಿಂದ ಪ್ರಾಣದಾನ. ಹಾಗೆ ಶರಣನಾಗಿ ಒಬ್ಬ ಅಪರಾಧಿ ಲಿಂಗದೇವನಿಗೆ ಶರಣಾಗಿ ಆತ್ಮ ನೈವೇದ್ಯವ ಮಾಡಿದರೆ ಅವನ ತಪ್ಪುಗಳು ಕ್ಷಮಿಸಲ್ಪಟ್ಟು ಅವನ ಕರ್ಮಗಳು ನಿವೃತ್ತಿಯಾಗಲು ಸಾಧ್ಯ, ಅದಕ್ಕಾಗಿ ಅಕ್ಕಮಹಾದೇವಿ ತಾಯಿಯವರೂ ಹೇಳುತ್ತಾರೆ. "ಹಿಂದನ ಜನನ ಏನಾದಡಾಗಲಿ ಮುಂದೆ ನೀ ಕರುಣಿಸಾ ಚನ್ನಮಲ್ಲಿಕಾರ್ಜುನಾ" ಎಂದು.

770. ಪ್ರಸಾದ ಕಾಯವ ಕೆಡಿಸಲಾಗದು.

ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯುಗುಣ.
ಆವ ಪದಾರ್ಥವಾದಡೇನು? ತಾನಿದ್ದೆಡೆಗೆ ಬಂದುದ
ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ.
ಲಿಂಗದೇವರನೊಲಿಸಲು ಬಂದ
ಪ್ರಸಾದಕಾಯುವ ಕೆಡಿಸಲಾಗದು. –ಬವದೀ. 771

ಯಾವ ನಡೆಯೂ ಅತಿರೇಕಕ್ಕೆ ಹೋಗದ ಸಹಜಸ್ಥಿತಿ ಪ್ರಾಪ್ತವಾಗಬೇಕು. ಅತಿಯಾಗಿ ಮಾತನಾಡುವುದು ಸಲ್ಲದು, ಪೂರ್ಣಮೌನವೂ ಸಲ್ಲದು. ಸತತ ಉಪವಾಸವೂ ಸರಿಯಲ್ಲ. ಮಿತಿ ಮೀರಿ ಉಣ್ಣುವುದು ಸರಿಯಲ್ಲ. ಯಾವುದೇ ವಸ್ತುವನ್ನು ಅತಿಯಾಗಿ ಪ್ರೀತಿಸಲೂ ಬಾರದು. ಅತಿಯಾಗಿ ದ್ವೇಷಿಸಲೂಬಾರದು. ಸಮತೋಲನದ ಮಾನಸಿಕ ಸ್ಥಿತಿ ಇರಬೇಕೆನ್ನುವುದೇ ಈ ವಚನದ ಅಂತರಾರ್ಥ. ಒಲ್ಲೆ ಎಂಬುದು ನಿರಾಕರಣ, ಒಲಿವೆ ಎಂಬುದು ಮಮಕಾರ; ಆವ ಪದಾರ್ಥವಾದರೇನು? ತನ್ನ ಬಳಿಗೆ ಬಂದುದನ್ನು ದೇವನಿಗೆ ಅರ್ಪಣ ಮಾಡಿ ಸ್ವೀಕರಿಸುವುದೇ ಆಚಾರ. ಅದರಲ್ಲಿ ರುಚಿಯನ್ನು ಅರಸಿ ಇದು ಉಪ್ಪು, ಹುಳಿ, ಕಾರ ಎಂದು ಮುಂತಾಗಿ ಹುಡುಕಲು ಹೋಗ ಬಾರದು. ದೇಹವಿದು ಲಿಂಗದೇವನನ್ನು ಒಲಿಸಲು ಬಂದ ಪ್ರಸಾದ ಕಾಯ. ಅದರ ಸಂರಕ್ಷಣೆಯೂ ಮುಖ್ಯ.

ಈ ವಚನದ ದುರುಪಯೋಗ ಮಾಡಿಕೊಳ್ಳ ಬಯಸುವ ವಿತಂಡವಾದಿಗಳು ಹೇಳುತ್ತಾರೆ: 'ನಾವಾಗಿ ಬಯಸುವುದಿಲ್ಲ. ತಾನಾಗಿಯೇ ಬರುತ್ತದೆ. ಉದಾಹರಣೆಗೆ ಸಿಗರೇಟು, ಮದ್ಯ ಸ್ನೇಹಿತರು ಒತ್ತಾಯ ಮಾಡಿ ಕೊಡುತ್ತಾರೆ. ಅದನ್ನು ಲಿಂಗಾರ್ಪಿತವ ಮಾಡಿ ಸ್ವೀಕರಿಸಬಹುದಲ್ಲವೆ? ಜೀವನಾವಶ್ಯಕತೆಗಳನ್ನು ದೈವೀಕರಿಸಬಹುದಲ್ಲದೆ ಭೋಗಗಳನ್ನಲ್ಲ. ಪ್ರಸಾದ ಕಾಯವನ್ನು ಸುಸ್ಥಿತಿಯಲ್ಲಿ ಇಡುವುದನ್ನು ಮಾತ್ರ ಲಿಂಗಾರ್ಪಿತವ ಮಾಡಿ ಸ್ವೀಕರಿಸಬೇಕು. ಸಿಗರೇಟಿನಿಂದ ಶ್ವಾಸಕೋಶಕ್ಕೆ ಹಾನಿಯಾಗುವುದು. ಮದ್ಯದಿಂದ ಕರುಳಿಗೆ ಹಾನಿಯಾಗುವುದು. ಇವು ಶರೀರಕ್ಕೆ ತೊಂದರೆ ಕೊಡುತ್ತವೆಯಾದ್ದರಿಂದ ಇವುಗಳನ್ನು ಲಿಂಗಾರ್ಪಿತ ಮಾಡಿ ಸ್ವೀಕರಿಸಲು ಬರುವುದಿಲ್ಲ.

771. ಶರಣ ಅಹಂ ಪ್ರಜ್ಞೆಯವನಲ್ಲ.

ಒಪ್ಪವ ನುಡಿವಿರಯ್ಯಾ ತುಪ್ಪವ ತೊಡೆದಂತೆ!
ಶರಣ ತನ್ನ ಮೆರೆವನೆ ಬಿನ್ನಾಣಿಯಂತೆ?
ಲಿಂಗದೇವನ ಪ್ರಸಾದದಿಂದ
ಬದುಕುವನಲ್ಲದೆ ತನ್ನ ಮೆರೆವನೆ? –ಬವದೀ. 772

ತುಪ್ಪವನ್ನು ಸವರಿದಂತಹ ಬಣ್ಣದ ಮಾತುಗಳನ್ನಾಡಿ ಜನರನ್ನು ಮೆಚ್ಚಿಸಲು ಹೋಗುವಿರಿ. ನಿಜ ಶರಣನು ತನ್ನನ್ನು ಮೆರೆಸಿಕೊಳ್ಳಲು ಪ್ರಯತ್ನಿಸುವುದಿಲ್ಲ. ಲಿಂಗದೇವನ ಪ್ರಸಾದ ಜೀವಿಯಾಗಿ ಬದುಕುವ ಶರಣನು ದೇವನ ಮಹಿಮೆಯನ್ನು ಮೆರೆಸುವನೇ ವಿನಾ ತನ್ನನ್ನು ತಾನು ಮೆರೆಸಿಕೊಳ್ಳುವುದಿಲ್ಲ.

772. ಅರ್ಪಿತ ಅರ್ಪಿತವೆಂದೆನ್ನುವಿರಿ.

ಅರ್ಪಿತ ಅರ್ಪಿತವೆಂದೆನುತ್ತಿಹಿರಿ:
ಗುರುವಿಂಗೆ ಕೊಡುವುದು ಅರ್ಪಿತವೆ? ಸವಿಸವಿದು ಕೊಡಬೇಕಲ್ಲದೆ.
ಅರ್ಪಿತ ಅರ್ಪಿತವೆಂದೆನುತ್ತಿಹಿರಿ:
ಲಿಂಗಕ್ಕೆ ಕೊಡುವುದು ಅರ್ಪಿತವೆ? ಸವಿಸವಿದು ಕೊಡಬೇಕಲ್ಲದೆ.
ಅರ್ಪಿತ ಅರ್ಪಿತವೆನುತ್ತಿಹರೆಲ್ಲರು
ಅರ್ಪಿತದ ಮುಖವನರಿಯರು ನೋಡಾ.
ಜಂಗಮಕ್ಕೆ ನೀಡಿ ಜಂಗಮಪ್ರಸಾದವ ಕೊಂಡಡೆ
ನಿನಗರ್ಪಿತ ಕಾಣಾ, ಲಿಂಗದೇವಾ! –ಬವದೀ. 773

ಗುರು ಲಿಂಗ ಜಂಗಮಕ್ಕೆ ನಾವು ಅರ್ಪಿಸುತ್ತೇವೆ ಎನ್ನುವರು. ಅರ್ಪಿತದ ಮರ್ಮ ಬೇರೆಯೇ ಇರುವುದು. ಗುರುವಿಗೆ ಅರ್ಪಿಸಬೇಕಾದರೆ ಮೊದಲು ತಾನು ಸವಿಯಬೇಕು. ಇದರರ್ಥ ಎಂಜಲು ಮಾಡಿ ಕೊಡಬೇಕೆಂದಲ್ಲ ; ಸಂತೋಷದಿಂದ ಸೇವೆಯನ್ನು ಮಾಡಬೇಕು. ಸವಿಯುತ್ತ ಸೇವೆಯನ್ನು ಮಾಡಬೇಕು. ಹಾಗೆಯೇ ಲಿಂಗಕ್ಕೆ ಅರ್ಪಿತ ಮಾಡುವಾಗ ಪ್ರಸಾದದ ಸವಿಯನ್ನು ಲಿಂಗದೇವನೇ ಹೊಂದುತ್ತಿರುವನು ಎಂಬ ಭಾವದಿಂದ ಸ್ವೀಕರಿಸಬೇಕು. ಜಂಗಮಕ್ಕೆ ನೀಡಿ ನಂತರ ತಾನು ಬಳಸಿದರೆ ಅದು ಪ್ರಸಾದ. ತನ್ನ ಆದಾಯದ ಒಂದು ಪಾಲನ್ನು ಮೊದಲು ಗುರು–ಜಂಗಮ, ಮಠ–ಸಮಾಜಕ್ಕೆ ಸಲ್ಲಿಸಿ ತಾನು ಬಳಸಿದರೆ ಅದು ನಿಜವಾದ ಪ್ರಸಾದ, ಅದು ನಿಜವಾದ ಅರ್ಪಿತ !

773. ಚತುರ್ವಿಧ ಸಂಪತ್ತು

ದಾಸೋಹವೆಂಬ ಸೋಹೆಗೊಂಡು ಹೋಗಿ,
ಗುರುವ ಕಂಡೆ, ಲಿಂಗವ ಕಂಡೆ,
ಜಂಗಮವ ಕಂಡೆ, ಪ್ರಸಾದವ ಕಂಡೆ.
ಇಂತೀ ಚತುರ್ವಿಧ ಸಂಪನ್ನನಾದೆ ಕಾಣಾ,
ಲಿಂಗದೇವಾ. –ಬವದೀ. 774

ದಾಸ+ಅಹಂ, ನಾನು ದಾಸ, ಸೇವಕ ಲಿಂಗದೇವನೊಬ್ಬನೇ ಜಗದ ಒಡೆಯ, ಮಾಲಿಕ. ಈ ಸೂತ್ರವನ್ನು ಅನುಸರಿಸಿ ಗುರು ಬಸವಣ್ಣನವರು ಸತ್ಯಾನ್ವೇಷಣೆಯ ದಾರಿಯಲ್ಲಿ ಸಾಗಿದರು. ಹಾಗೆ ಸಾಗುವಾಗ ನಾಲ್ಕು ಅಮೂಲ್ಯ ತತ್ತ್ವಗಳೆಂಬ ರತ್ನಗಳನ್ನು ಕಂಡರು. ಅವೆಂದರೆ ಗುರು, ಲಿಂಗ, ಜಂಗಮ ಮತ್ತು ಪ್ರಸಾದ. ಈ ನಾಲ್ಕು ಸ್ತಂಭಗಳ ಮೇಲೆಯೇ ಬಸವ ಧರ್ಮದ ಭವನ ನಿಂತಿರುವುದನ್ನು ಕಾಣಬಹುದು. ಗುರು–ಲಿಂಗ–ಜಂಗಮ ಇವು ಪೂಜಾವಸ್ತುಗಳು. ಪೂಜೆ ಮಾಡಿದ್ದಕ್ಕೆ ಪ್ರತಿಫಲ ಪ್ರಸಾದ. ಇದಕ್ಕೆ ಚತುರ್ವಿಧ ಸಾರಾಯ ಸಂಪತ್ತು ಎನ್ನಲಾಗುವುದು.

774. ಜನ್ಮದ ಸಾರ್ಥಕತೆ.

ಸಜ್ಜನ ಶರಣರ ಕಂಡು ಎನ್ನ ಮನ ಉಬ್ಬಿತ್ತು ನೋಡಿರಯ್ಯಾ!
ಶ್ರೀಗುರುಪಾದವ ಹಿಡಿದು ಪಾವನನಾದೆನಯ್ಯಾ.
ಪಾದೋದಕ ಪ್ರಸಾದದಿಂದ ಭವಗೆಟ್ಟೆನು, ಲಿಂಗದೇವಾ. –ಬವದೀ. 775

ಸಹ ಧರ್ಮಿಯನ್ನು ಕಂಡಾಗ ಮನಸ್ಸು ಉಬ್ಬಿ ಕೊಬ್ಬಿ ಆನಂದಿಸಬೇಕು. ಅಂಥ ಶರಣರ ಸತ್ಸಂಗಕ್ಕೆ ಹಂಬಲಿಸಬೇಕು. ಶ್ರೀ ಗುರು ಪಾದವ ಹಿಡಿದು ದೀಕ್ಷಾವಂತರಾಗಿ ಆನಂದಿಸಬೇಕು. ಗುರು–ಲಿಂಗ–ಜಂಗಮ–ಪಾದೋದಕ–ಪ್ರಸಾದದಿಂದ ಭವಬಾಧೆಯನ್ನು ಹರಿದುಕೊಳ್ಳಬೇಕು.

775. ಸೂತಕದ ನಿವಾರಣೆಯ ಸಾಧನಗಳು.

ಕಿವಿಯ ಸೂತಕ ಹೋಯಿತ್ತು, ಸದ್ಗುರುವಿನ ವಚನದಿಂದ,
ಕಂಗಳ ಸೂತಕ ಹೋಯಿತ್ತು, ಸದ್ಭಕ್ತರ ಕಂಡೆನಾಗಿ.
ಕಾಯದ ಸೂತಕ ಹೋಯಿತ್ತು, ನಿಮ್ಮ ಚರಣವ ಮುಟ್ಟಿದೆನಾಗಿ.
ಬಾಯ ಸೂತಕ ಹೋಯಿತ್ತು, ನಿಮ್ಮ ಒಕ್ಕುದ ಕೊಂಡೆನಾಗಿ.
ನಾನಾ ಸೂತಕ ಹೋಯಿತ್ತು, ನಿಮ್ಮ ಶರಣರ ಅನುಭಾವಿಯಾಗಿ.
ಲಿಂಗದೇವ ಕೇಳಯ್ಯಾ, ಎನ್ನ ಮನದ ಸೂತಕ ಹೋಯಿತ್ತು.
ನೀವಲ್ಲದಿಲ್ಲೆಂದರಿದೆನಾಗಿ. –ಬವದೀ. 776

ಕಿವಿಯು ನಾನಾ ಬಗೆಯ ಮೈಲಿಗೆಗೆ ಒಳಗಾಗುತ್ತದೆ. ಅದಕ್ಕೆ ಯಾವುದೇ ಬಾಗಿಲು ಪಡಕಗಳು ಇಲ್ಲದಿರುವುದರಿಂದ ಮುಚ್ಚಿಕೊಳ್ಳಲು ಬರುವುದಿಲ್ಲ. ಹೀಗಾಗಿ ಬೇಕಾದ, ಬೇಡವಾದ ವಿಚಾರಗಳೆಲ್ಲ ಕಿವಿಯ ಮೂಲಕ ಪ್ರವೇಶಿಸಿ ಶಬ್ದ ಮಾಲಿನ್ಯದ ಜೊತೆಗೆ ಮೈಲಿಗೆಯನ್ನು ಹೊತ್ತು ತರುತ್ತವೆ. ಇದನ್ನು ಕಳೆಯಲು ಇರುವುದು. ಒಂದೇ ಪರಿಹಾರ ; ಅದು ಸದ್ಗುರುವಿನ ಪ್ರವಚನ ಶ್ರವಣ. ಚಾಡಿಯ ಮಾತುಗಳು, ನಿಂದೆಯ ಮಾತುಗಳು, ಆಡಿಕೊಳ್ಳುವಿಕೆ ಇತ್ಯಾದಿಗಳು ಕಿವಿಯ ಸೂತಕಕ್ಕೆ ಕಾರಣವಾಗುತ್ತವೆ. ಸದ್ಗುರುವಿನ ವಾಣಿಯಿಂದ ಶಬ್ದ ಶ್ರವಣದಿಂದಾಗುವ ಮೈಲಿಗೆ ನಿವಾರಣೆಯಾಗುವುದು.

ಕಣ್ಣುಗಳು ಅನಿವಾರ್ಯವಾಗಿ ಕಾಣುವ ಕೆಟ್ಟ ದೃಶ್ಯಗಳಿಂದ ಸೂತಕವನ್ನು ಉಂಟು ಮಾಡುತ್ತವೆ. ಇವು ಪವಿತ್ರವಾಗುವುದು ಸಹಧರ್ಮೀಯರಾದ ಶರಣರನ್ನು ದರ್ಶಿಸಿದಾಗ. ಶರೀರವು ಅರಿತೋ ಅರಿಯದೆಯೋ ತಪ್ಪು ಮಾಡಿರಬಹುದು. ಈ ಪಾಪವು ನಿವಾರಣೆಯಾಗುವುದು ಶರಣರ ಪಾದವನ್ನು ಸ್ಪರ್ಶಿಸಿದಾಗ. ಪ್ರತಿನಿತ್ಯ ಸುಪ್ರಭಾತದಲ್ಲಿ ಪೂಜೆ ಮಾಡಿ, ೩ ಬಾರಿ ಇಷ್ಟಲಿಂಗದ ನೆತ್ತಿಯ ಮೇಲೆ ನೀರನ್ನೆರೆದು ತೀರ್ಥ, ಪ್ರಸಾದವನ್ನು ಕೊಳ್ಳುವುದರಿಂದ ಬಾಯಿಯ ಮೈಲಿಗೆ ಹೋಗುವುದು. ಏಕೆಂದರೆ ದೇವನಿಗೆ ಎಲ್ಲ ವಸ್ತುಗಳನ್ನೂ ಮೊದಲು ಸಮರ್ಪಿಸಿ ನಂತರ ನಾವು ಬಳಸುವುದೇ ಇದರ ಹಿಂದಿನ ಉದ್ದೇಶ. ಇನ್ನು ನಮಗೆ ಗೊತ್ತಿಲ್ಲದಂತೆಯೇ ಜ್ಞಾನೇಂದ್ರಿಯ, ಕರ್ಮೇಂದ್ರಿಯ ಅಂತಃಕರಣಗಳು ಬಗೆಬಗೆಯ ಸೂತಕವನ್ನು ಉಂಟು ಮಾಡುತ್ತಿರಬಹುದು ಇವೆಲ್ಲವೂ ಶರಣರ ಸಂಗದಲ್ಲಿ ಒಡನಾಡುವುದರಿಂದ ಅವರನ್ನು ನೋಡಿ ತಪ್ಪುಗಳನ್ನು ತಿದ್ದಿಕೊಳ್ಳುವುದರಿಂದ ನಿವಾರಣೆಯಾಗುವುವು. "ಲಿಂಗದೇವ ಕೇಳಯ್ಯ, ಮನಸ್ಸಿನ ಸೂತಕವಾದ ಭಯಭ್ರಾಂತಿಗಳು ನಿವಾರಣೆಯಾಗುವುವು–ನೀವಲ್ಲದೆ ಅನ್ಯ ಶಕ್ತಿಯು ಈ ಜಗತ್ತಿನಲ್ಲಿ ಇಲ್ಲವೆಂದು ದೃಢವಾಗಿ ನಂಬಿದುದರಿಂದ."

ಗುರುವಿಂಗೆ ದೈವಕ್ಕೆ, ಹಿರಿದು ಅಂತರವುಂಟು
ಗುರುತೋರ್ವ ದೈವದೆಡೆಯನು ದೈವತಾ
ಗುರುವ ತೋರುವನೇ? ಸರ್ವಜ್ಞ

ನೆನಪಿನ ಬುತ್ತಿ ಬಿಚ್ಚಿದಾಗ – 6

ಜಗನ್ಮಾತಾ ಅಕ್ಕಮಹಾದೇವಿಯ ದಿವ್ಯ ದರ್ಶನ–ಸಗುಣ ಸಾಕ್ಷಾತ್ಕಾರ ಪ್ರಾಪ್ತಿಯಾದ ನಂತರ ನಾನು ಪೂರ್ತಿಯಾಗಿ ಅಂತರ್ಮುಖಿಯಾದೆ. ತಾಯಿಯವರ ಜೊತೆಗೂ ಹೆಚ್ಚು ಮಾತನಾಡಲಿಲ್ಲ. ಪೂಜೆ–ಧ್ಯಾನ–ಅಧ್ಯಯನ–ವಚನ ರಚನೆ ಇವುಗಳಲ್ಲೇ ನಾನು ತಲ್ಲೀನಳಾದೆ. ತಾಯಿ ಗಂಗಮ್ಮನವರಲ್ಲಿ ಬದಲಾವಣೆ ಕಾಣತೊಡಗಿತು. ಈವರೆಗೂ ನನ್ನನ್ನು ಕೇವಲ ಮಗಳೆಂದು ತಿಳಿದಿದ್ದ ಅವರು ಈಗ ಪೂಜ್ಯ ಭಾವದಿಂದ ನೋಡತೊಡಗಿದರು. ಒಂದು ದಿನ ನಾನು ಪೂಜೆ–ಧ್ಯಾನ ಮುಗಿಸಿ ಬಾಗಿಲು ತೆರೆದು ಹೊರಬಂದಾಗ ಅವರು ಅಚ್ಚರಿಯಿಂದ ನನ್ನನ್ನು ನೋಡುತ್ತ, "ನೀನು ನನ್ನ ಮಗಳೆ ? ನಾನು ಜನ್ಮ ಕೊಟ್ಟದ್ದು ನಿನಗೆಯೆ? ಇಲ್ಲ. ನಾನು ನಿಮಿತ್ತ ಮಾತ್ರಳು. ಯಾವುದೋ ದೈವೀ ಶಕ್ತಿ ನಿನ್ನಲ್ಲಿ ತುಂಬಿಕೊಂಡಿದೆ. ಇನ್ನು ನಾನು ನಿನಗೆ ಅಡ್ಡಿ ಮಾಡುವುದಿಲ್ಲ......" ಎನ್ನತೊಡಗಿದರು. ಅಂದಿನಿಂದ ನನ್ನ ದಾರಿ ಸುಗಮವಾಯಿತು.

ಇದೇ ಗಂಗಮ್ಮನವರೇ ನನಗೆ ಒಂದು ಧರ್ಮಸಂಕಟದ ಪ್ರಶ್ನೆ ಮುಂದಿಟ್ಟವರು. " ನನ್ನಂತಹ ತಾಯಿಯ ಕಣ್ಣೀರು ಹಾಕಿಸಿ ನೀನು ಹೋಗಿ ಏನು ಸಾಧಿಸುತ್ತೀಯ ?" ಎಂದಿದ್ದರು. ಆಗ ನಾನು ಮನಸ್ಸನ್ನು ಗಟ್ಟಿಗೊಳಿಸಿಕೊಂಡು ಅವರಿಗೆ ಉತ್ತರಿಸಿದ್ದೆ. "ಒಂದು ಅಣೆಕಟ್ಟನ್ನು ಕಟ್ಟುವಾಗ ಸಾವಿರಾರು ಎಕರೆ ಭೂಮಿ ನೀರಿನಲ್ಲಿ ಮುಳುಗುತ್ತದೆ. ಹಾಗೆಂದು ಅಣೆಕಟ್ಟು ಕಟ್ಟುವುದನ್ನು ನಿಲ್ಲಿಸುವುದಿಲ್ಲ. ಏಕೆಂದರೆ ಮುಂದೆ ಲಕ್ಷಾಂತರ ಎಕರೆ ನೀರುಂಡು ಹಸಿರಾಗುತ್ತದೆ. ಹಾಗೆ ಒಬ್ಬ ತಾಯಿಯು ಕಣ್ಣೀರು ಹಾಕಿದರೇನಂತೆ ಮುಂದೆ ಸಹಸ್ರಾರು ತಾಯಂದಿರ ಕಣ್ಣೀರು ಒರೆಸಲು ಸಾಧ್ಯವಾಗುತ್ತದೆ." ಆಗ ಅವರಿಗೆ ಎಷ್ಟು ಸಮಾಧಾನವಾಗಿತ್ತೋ ತಿಳಿಯದು. ಈಗ ನಿಧಾನವಾಗಿ ಅರಿತುಕೊಳ್ಳುತ್ತಿದ್ದರು. ತಾತಂದಿರು ತಾಯಿಯವರನ್ನು ಖಂಡಿತಾ ದೂಷಿಸುತ್ತಾರೆ ಎಂದು ತಿಳಿದಿದ್ದರೂ ನನಗೆ ಮನೆಯಿಂದ ಹೊರಡಲು ತಾಯಿಯವರು ಅನುಮತಿ ಕೊಟ್ಟರು. ಮನೆಯಿಂದ ಹೊರಟುಬಿಟ್ಟೆ.

ದಾವಣಗೆರೆಯ ವಿಶ್ವಕಲ್ಯಾಣ ಮಂಟಪಕ್ಕೆ ಬರುವಷ್ಟರಲ್ಲಿ ಪೂಜ್ಯ ಗುರುಗಳು ಮೈಸೂರಿಗೆ ಪ್ರವಚನಕ್ಕೆ ಹೋಗಿದ್ದರು. ಆಗಸ್ಟ್‌ನಲ್ಲಿ ನಾನು ಪ್ರಥಮಬಾರಿಗೆ ಬಂದಾಗ ರಾಜನಹಳ್ಳಿ ಹನುಮಂತಪ್ಪ ಅವರ ಛತ್ರದಲ್ಲಿ ಪ್ರವಚನ ನಡೆಯುತ್ತಿತ್ತು. ಒಂದೇ ಒಂದು ದಿನ ಪ್ರವಚನ ಕೇಳಲು ಅವಕಾಶ ದೊರೆತಿತ್ತು. 1965ರ ನವೆಂಬರ್ ತಿಂಗಳಿನಿಂದ ಸುಮಾರು 5 ತಿಂಗಳು ಕಾಲ ಅವ್ಯಾಹತವಾಗಿ ಅಲ್ಲಮಪ್ರಭು, ಅಕ್ಕಮಹಾದೇವಿ, ಬಸವಣ್ಣ ಕುರಿತಂತೆ ಪ್ರವಚನಗಳನ್ನು ಪೂಜ್ಯರು ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಮಾಡುತ್ತಿದ್ದರು. ನಾನು ಪತ್ರದಲ್ಲಿ ಬರೆದು ಕಳಿಸಿದ ವಚನಗಳು ಮತ್ತು ಗೀತೆಗಳನ್ನು "ಮಾತೃವಾಣಿ" ಎಂಬ ಶೀರ್ಷಿಕೆಯಡಿಯಲ್ಲಿ ಪೂಜ್ಯ ಗುರುಗಳು ಪ್ರಕಟಿಸಿದ್ದು, ಸಂತೆ ಪೇಟೆಯಲ್ಲಿ ಪೂಜ್ಯ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ಕರ್ನಾಟಕ ಸರ್ಕಾರದಲ್ಲಿ ಆಹಾರ ಮಂತ್ರಿಗಳಾಗಿದ್ದ ಬಸವ ಸಮಿತಿಯ ಅಧ್ಯಕ್ಷರಾಗಿದ್ದ ಶರಣ.ಬಿ.ಡಿ.ಜತ್ತಿಯವರು ದಿ.20–12–1965 ರಂದು ಬಿಡುಗಡೆ ಮಾಡಿದ್ದರು. "ಮಾತೃವಾಣಿ" ಕುರಿತು ಪ್ರಶಂಸೆಯ ಮಾತುಗಳನ್ನಾಡಿದ್ದರು.

("ಈ ಗ್ರಂಥವನ್ನು ಪೂರ್ತಿ ಓದಿದ್ದೇನೆ. ನಾನು ಶೇಕಡಾ 70 ಭಾಗದಷ್ಟು ಅರ್ಥಮಾಡಿಕೊಂಡಿದ್ದೇನೆ. ನನ್ನ ಅನುಭವ ಬುದ್ಧಿಗೆ ಅತೀತವಾಗಿ ಅನೇಕ ವಚನಗಳು ಇದರಲ್ಲಿವೆ. ಈ ಗ್ರಂಥ ಬರೆದ ಮಾತಾಜಿಯವರು ಕೇವಲ 19 ವರ್ಷದವರೆಂದು ಕೇಳಿ ತುಂಬಾ ಆಶ್ಚರ್ಯ ಆನಂದವೆನಿಸುತ್ತದೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಹೀಗೆ ಬರೆಯಬೇಕಾದರೆ ಅವರು ಅವತಾರಿಕರೇ ಇರಬೇಕು. ಅವರ ದರ್ಶನ ಪಡೆಯಬೇಕೆಂದು ನನಗೆ ಅನಿಸುತ್ತದೆ.)

ನಂತರ ನನ್ನ ಎರಡನೇ ಕೃತಿಯನ್ನಾಗಿ "ವಿರಹ ತರಂಗ" ಕೃತಿಯನ್ನು ಸಹ ಬಿಡುಗಡೆ ಮಾಡಿದರು. ಮೈಸೂರಿನ ವೀರನಗೆರೆ ಎಂಬಲ್ಲಿ ಪ್ರವಚನ ನಡೆಯುತ್ತಿತ್ತು. ನಾನು ಮನೆಯಿಂದ ಬಂಧನ

ಬಿಡಿಸಿಕೊಂಡು ಮಠಕ್ಕೆ ಬಂದ ವಿಷಯ ತಿಳಿಯುತ್ತಲೇ ಪೂಜ್ಯ ಗುರುಗಳು ಮೈಸೂರಿಗೆ ಬರಲು ಆಹ್ವಾನಿಸಿದರು. ಮಾತೃವಾಣಿ, ವಿರಹ ತರಂಗ ಪುಸ್ತಕಗಳನ್ನು ಬೇರೆ ಓದಿ ಜನರಲ್ಲಿ ಕುತೂಹಲ ಗರಿಗೆದರಿತ್ತು. ನಾನು ರೈಲಿನಲ್ಲಿ ಹೊರಟೆ.

ಅದೇ ಮೊದಲ ಬಾರಿ ಈ ರೀತಿ ಪ್ರಯಾಣ. ಮನಸ್ಸಿನಲ್ಲಿ ಅಧೈರ್ಯ ಕಾಡುತ್ತಿತ್ತು. ರೈಲು ನಿಲ್ದಾಣಕ್ಕೆ ಯಾರಾದರೂ ಕರೆಯಲು ಬಂದಿರುವರೋ ಇಲ್ಲವೋ, ಗುರುಗಳು ಯಾರನ್ನಾದರೂ ಕಳಿಸಿರುವರೋ ಇಲ್ಲ ಮರೆತು ಬಿಟ್ಟರೋ? ಅವರ ವಿಳಾಸ ಪತ್ತೆ ಹಚ್ಚಿಕೊಂಡು ಹೇಗೆ ಹೋಗುವುದು ಎಂಬ ಆತಂಕ ಇರುವಾಗಲೇ ರೈಲ್ವೆ ನಿಲ್ದಾಣ ಬಂದು ಬಿಟ್ಟಿತು. ನಿಲ್ದಾಣದ ತುಂಬ ಜನವೋ ಜನ! ನನಗೆ ಮತ್ತಷ್ಟು ಗಾಬರಿ. ಈ ಜನರ ಮಧ್ಯೆ ನನ್ನನ್ನು ಕರೆದೊಯ್ಯಲು ಬಂದವರನ್ನು ಹುಡುಕುವುದು ಹೇಗೆ? ಆತಂಕ ಹೆಚ್ಚಾಯಿತು. ಜನರ ಕೈಯಲ್ಲಿ ಘಮಘಮಿಸುವ ಮೈಸೂರು ಮಲ್ಲಿಗೆಯ ಮಾಲೆಗಳೋ ಮಾಲೆಗಳು. ಇವರೆಲ್ಲ ಯಾರನ್ನೋ ಸ್ವಾಗತಿಸಲು ಬಂದಂಗೆ ಕಾಣುತ್ತದೆ. ನನ್ನ ಜೊತೆ ಓರ್ವ ಅಜ್ಜಿಯನ್ನು ಕರೆದುಕೊಂಡು ಬಂದಿದ್ದೆ. ಅವರನ್ನೂ ಕರೆದುಕೊಂಡು ಕೆಳಗೆ ಇಳಿಯುತ್ತಲೇ ಜನರು ನನ್ನನ್ನು ಸುತ್ತುವರೆದು ಮಾಲೆ ಹಾಕತೊಡಗಿದರು. ಆ ನಿಲ್ದಾಣದಲ್ಲೇ ಅಲ್ಲಿಯವರೆಗೂ ಎಂದೆಂದೂ ಅಷ್ಟು ಜನರು ಸೇರಿರಲಿಲ್ಲವಂತೆ. ಆಗ ಒಬ್ಬರು ಒಂದು ಕುರ್ಚಿ ತಂದಿಟ್ಟು ಕುಳ್ಳಿರಲು ಹೇಳಿದರು. ಮಾಲೆಗಳನ್ನು ಹಾಕಿ, ನಮಸ್ಕರಿಸಿ ದರ್ಶನ ಪಡೆದರು. ಕರೆಯಲು ಬಂದ ಕಾರಿನಲ್ಲಿ ಹೊರಟೆವು. ಆ ಅನುಭವವು ಇನ್ನೂ ಮರೆಯಲಾಗದಂತೆ ನೆನಪಿನಲ್ಲಿ ಅಚ್ಚೊತ್ತಿದೆ. ಮತ್ತೊಂದು ರೋಚಕ ಅನುಭವ ಸಂಜೆಯ ಕಾರ್ಯಕ್ರಮ. ನನ್ನ ಜೀವಮಾನದಲ್ಲೇ ಎಂದೂ ಭಾಷಣ ಮಾಡಲು ವೇದಿಕೆ ಏರಿರಲಿಲ್ಲ. "ಇಂದು ಸಂಜೆ ಬೃಹತ್ ಸಭೆ. ನಿಮ್ಮ ಬಗ್ಗೆ ಬಹಳ ಭಕ್ತಿ–ಕುತೂಹಲ ಹುಟ್ಟಿಸಿದ್ದೇನೆ. ನಿಮ್ಮ ಪುಸ್ತಕಗಳು ಪ್ರಭಾವ ಬೀರಿವೆ. ಇಂದು ನಿಮ್ಮ ಮುಖ್ಯ ಭಾಷಣ" ಎಂದು ಪೂಜ್ಯ ಗುರುಗಳು ಹೇಳಿಬಿಟ್ಟರು. ನನಗೊ ಕೈಕಾಲು ನಡುಕ. ಬೃಹತ್ ಸಭೆ, ಜನವೋ ಜನ. ಕಣ್ಮುಚ್ಚಿಕೊಂಡು ಸಚ್ಚಿದಾನಂದನನ್ನು, ಅಕ್ಕಮಹಾದೇವಿ ಯನ್ನು ಸ್ಮರಿಸಿಕೊಂಡೆ. ಮುಂದೆ ಜನರು ಕಾಣಲಿಲ್ಲ, ಬರಿ ಬೆಳಕು. ಒಂದೂ ಕಾಲುಗಂಟೆ ಮಾತನಾಡಿದೆ.ಜನರು ಹರ್ಷೋದ್ಗಾರ ಮಾಡುತ್ತಿದ್ದರು. ಕಾರ್ಯಕ್ರಮದ ನಂತರ ದರ್ಶನಕ್ಕೆ ಜನರ ನೂಕುನುಗ್ಗಲು. ಮನೆಗೆ ಬಂದ ಮೇಲೆ ಪೂಜ್ಯ ಗುರುಗಳು ಕುಣಿದಾಡಿಬಿಟ್ಟರು. "ನಿಮ್ಮ ಬಗ್ಗೆ ಬಹಳ ಹೇಳಿದ್ದೆ, ನನ್ನ ಮಾತಿಗೆ ಬೆಲೆ ಬಂದಿತು, ನನ್ನ ಗೌರವ ಉಳಿಸಿದಿರಿ." ಎಂದು ಉದ್ಗರಿಸಿದರು. "ಎಲ್ಲಾ ದೇವರ ಇಚ್ಛೆ, ನಾನೇನು ಮಾತನಾಡಿದೆನೋ ನನಗೆ ತಿಳಿದಿಲ್ಲ. ಪರಮಾತ್ಮನು ನುಡಿಸಿದಂತೆ ನುಡಿದಿದ್ದೇನೆ" ಎಂದು ಪಾದಕ್ಕೆ ನಮಸ್ಕರಿಸಿದೆ.

ವೀರನಗೆರೆ ನಂತರ ಕೆಸರೆ ಎಂಬಲ್ಲಿ ಪ್ರವಚನವಾಯಿತು. ಪ್ರವಚನ ಮುಗಿಸಿಕೊಂಡು ದಾವಣಗೆರೆಗೆ ಬಂದೆವು. ಮೈಸೂರಿನ ಜನರ ಭಕ್ತಿ–ಅಭಿಮಾನಗಳ ಮಹಾಪೂರದಲ್ಲಿ ಮಿಂದಿದ್ದೆವು. ಬೀಳ್ಕೊಡಲು ಸಾವಿರಾರು ಜನರು ರೈಲ್ವೆ ನಿಲ್ದಾಣಕ್ಕೆ ಬಂದಿದ್ದರು. 5 ತಿಂಗಳಿಂದಲೂ ಸತತವಾಗಿ ಪ್ರವಚನ ಕೇಳಿ ನಿಕಟವಾಗಿ ಪರಿಚಯವಾಗಿದ್ದ ಕೆಲವರಂತೂ ಪೂಜ್ಯ ಗುರುಗಳನ್ನು ಅಗಲಲಾರದೆ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ರಕ್ತ ಸಂಬಂಧದವರನ್ನು ಅಗಲುವುದಕ್ಕಿಂತಲೂ ಭಕ್ತಿ ಸಂಬಂಧದವರನ್ನು ಅಗಲುವುದು ಕಷ್ಟಸಾಧ್ಯ. ಅಕ್ಕಮಹಾದೇವಿ ತಾಯಿಯವರು ಹೇಳುವಂತೆ 'ಶರಣರನಗಲುವ ಧಾವತಿಗಿಂತ ಮರಣವೇ ಲೇಸು;'

1966ರ ಏಪ್ರಿಲ್ 5ನೇ ತಾರೀಖು ಮಂಗಳವಾರ ದವನದ ಹುಣ್ಣಿಮೆ–ಅಂದು ಅಕ್ಕ ಮಹಾದೇವಿ ಜಯಂತಿ. ಅಂದು ಪೂಜ್ಯ ಗುರುಗಳು ನನಗೆ ಜಂಗಮ ದೀಕ್ಷೆಯನ್ನು ಕೊಟ್ಟರು. ನನ್ನಿಂದ ಪ್ರತಿಜ್ಞೆಯನ್ನು ಮಾಡಿಸಿದರು.

1. ಎಂದೆಂದಿಗೂ ನನ್ನ ಪಾವಿತ್ರ್ಯತೆಯನ್ನು ಕಾಯ್ದುಕೊಳ್ಳುತ್ತೇನೆ.
2. ವೀರ ವಿರಾಗಿಣಿ, ಪರಮ ಜಂಗಮಮೂರ್ತಿ ಮಹಾದೇವಿಯಕ್ಕನ ಆದರ್ಶದಲ್ಲಿ ಮುನ್ನಡೆಯುತ್ತೇನೆ.
3. ವಿಶ್ವಕಲ್ಯಾಣ ಮಂಟಪದ ಧ್ಯೇಯಧೋರಣೆಯ ಆದರ್ಶ ಸಾಧನೆಗೆ, ಬಸವಧರ್ಮ ಪ್ರಚಾರಕ್ಕೆ ಶ್ರಮಿಸುತ್ತೇನೆ.
4. ಬಹಿರಂಗ ವ್ಯವಹಾರಕ್ಕೆ ಪುತ್ರಿಯಾಗಿ, ಶಿಷ್ಯಳಾಗಿರುತ್ತೇನೆ. ಅಂತರಂಗದಲ್ಲಿ ಅಕ್ಕನ ಸಾಕ್ಷಿಯಾಗಿ ಪುತ್ರಮಯ ಮಾತೃವಾತ್ಸಲ್ಯದಿಂದ ಕಾಪಾಡುತ್ತೇನೆ.
5. ಸದಾ ಆದರ್ಶಮಯ ಧ್ಯೇಯಧೋರಣೆಗಳನ್ನಿಟ್ಟುಕೊಂಡು ಸಕಲರ ಲೇಸಿಗಾಗಿ ಶ್ರಮಿಸುತ್ತೇನೆ.
6. ಗುರುಗಳಿಗೆ ಎಂದೂ ಯಾವುದೇ ಕಾರಣಕ್ಕಾಗಿ ಸುಖ-ದುಃಖ ಎರಡರಲ್ಲೂ ಪ್ರಮಥರೆಲ್ಲರ ಸಾಕ್ಷಿಯಾಗಿ ದ್ರೋಹ ಬಗೆಯುವುದಿಲ್ಲ.

ಹೀಗೆ ಪ್ರತಿಜ್ಞೆಮಾಡಿಸಿ ಕಾವಿ ಲಾಂಛನದೊಡನೆ ಜಂಗಮ ದೀಕ್ಷೆಯನ್ನಿತ್ತು ಅಕ್ಕನ ಆದರ್ಶದಂತೆ ನಡೆಯಲು ಹರಸಿದರು.

ಭಕ್ತರೊಡನೆ 1966 ಮೇ ತಿಂಗಳಲ್ಲಿ ಅನೇಕ ಶರಣರ ಕ್ಷೇತ್ರಗಳನ್ನು ಸಂದರ್ಶಿಸಿದೆವು. ಉಡುತಡಿ, ಬನವಾಸಿ, ಸೊಲ್ಲಾಪುರ, ಬಸವ ಕಲ್ಯಾಣ, ಕಲಬುರ್ಗಿ, ಬಾಗೇವಾಡಿ, ಕೂಡಲಸಂಗಮ, ಸಜ್ಜಲಗುಡ್ಡ, ಹಂಪೆ, ಶ್ರೀಶೈಲ, ಮಹಾನಂದಿ, ಸಿದ್ದಗಂಗಾ, ಎಡೆಯೂರು ಇತ್ಯಾದಿ ಕ್ಷೇತ್ರಗಳನ್ನು ಭಕ್ತರಿಗೆ ತೋರಿಸಿದೆವು. ನಾವು ಶರಣರ ಪುಣ್ಯ ಭೂಮಿಯಲ್ಲಿ ಹಲವಾರು ಪ್ರತಿಜ್ಞೆಗಳನ್ನು ಕೈಗೊಂಡೆವು. ಸೋಮವಾರ ದಿನಾಂಕ 23-5-1966ರ ಶುಭ ದಿನದಂದು ಸಜ್ಜಲಗುಡ್ಡದ ಶರಣಮ್ಮನವರನ್ನು ಸಂದರ್ಶಿಸಿದೆವು. ಅವರು ನನ್ನನ್ನು ನೋಡಿ ತುಂಬ ಸಂತೋಷದಿಂದ "ಕಾಯ ಕಿರಿದಾದರೂ ಮನ ಮುಪ್ಪಾಗಿದೆಯಲ್ಲಾ ?......" ಎಂದು ಉದ್ಗಾರ ತೆಗೆದರು. ನಾನು ಹಾಡಿದ ಪದ್ಯಗಳನ್ನು ಕೇಳಿ ಭಾವಪುಳಕಿತರಾಗಿ,

ನುಡಿದಂತೆ ನಡೆ.... ನಡೆದಂತೆ ನುಡಿ
ಇಟ್ಟ ಹೆಜ್ಜೆ ಹಿಂತೆಗೆಯಬೇಡ
ಹಿಡಿದದ್ದು ಕಡೆಯವರೆಗೂ ಬಿಡಬೇಡ.

ಎಂದು ಶರಣಮ್ಮನವರು ನುಡಿದು, ನನ್ನ ಕಡೆಯಿಂದ ಪುನರ್ವಚಿಸಿ ಹರಸಿದರು. ಶರಣಮ್ಮನವರ ಮಾಗಿದ ಜೀವನದಿಂದ ಬಂದ ಹರಕೆಯನ್ನು ಹೊತ್ತು ನಾನು ಅವರಿಗೆ ಕೃತಜ್ಞತೆಯನ್ನರ್ಪಿಸುವ ಉದ್ದೇಶದಿಂದ "ಶಿವಯೋಗಿಣಿ" ಎಂಬ ಗ್ರಂಥವನ್ನು ಶರಣಮ್ಮನವರಿಗೆ ಸಮರ್ಪಿಸಿದ್ದೇನೆ.

ಎದುರಾದ ಸಂಕಷ್ಟ

ಪ್ರವಾಸ ನಿರ್ವಿಘ್ನವಾಗಿ ನೆರವೇರಿತು. ಜ್ಞಾನ ಬೋಧಕವಾಗಿ ಇದ್ದಿತು. ಅಲ್ಲಿಂದ ಬಂದ ಕೆಲವೇ ದಿನಗಳಲ್ಲಿ ಬಹುದೊಡ್ಡ ಸಂಕಷ್ಟ ಎದುರಾಯಿತು. ಶ್ರೀ ಮಾಗನೂರು ಬಸಪ್ಪನವರು ಸಾದರ ಲಿಂಗಾಯತ ಸಮಾಜದ ಹಿರಿಯರು, ದಾನ ಚಿಂತಾಮಣಿ ಎಂಬ ಬಿರುದು ಹೊತ್ತವರು. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನ ಮಾಡಿಸಿದ್ದಲ್ಲದೆ ಎಲ್ಲ ರೀತಿಯಿಂದಲೂ ನೆರವಾಗುತ್ತಿದ್ದವರು. ಪೂಜ್ಯ ಗುರುಗಳು ಪ್ರವಚನಗಳನ್ನು ಮಾಡಿ ಬಂದ ಕಾಣಿಕೆಯನ್ನು ಮಾಗನೂರು ಬಸಪ್ಪನವರಿಗೇ ಕಳಿಸುತ್ತಿದ್ದರು. 9ಎಕರೆ ಜಮೀನನ್ನು ಪೂಜ್ಯ ಅಪ್ಪಾಜಿ ಖರೀದಿಸಿದ್ದರು. ಅದರ ಕ್ರಯ ಪತ್ರ ಸಹ ಬಸಪ್ಪನವರ ಬಳಿ ಇತ್ತು. ಅಷ್ಟು ವಿಶ್ವಾಸವನ್ನು ಗುರುಗಳು ಅವರ ಮೇಲೆ ಇಟ್ಟಿದ್ದರು. ಆದರೆ ಬಸಪ್ಪನವರು ಈಗ ಗುರುಗಳಿಗೆ ಒಂದು ವಿಷಯದಲ್ಲಿ ಎದುರಾದರು. "ಹೆಣ್ಣು ಮಕ್ಕಳಿಗೆ ಆಶ್ರಯ ಕೊಡಬಾರದು. ಮಾತೆ ಮಹಾದೇವಿಯವರಿಗೆ ಅವಕಾಶ ಕೊಡಬಾರದು." ಎಂದು ಖಡಾಖಂಡಿತವಾಗಿ ಹೇಳಿದರು."ಇವರು ಸಾಮಾನ್ಯ ಹೆಣ್ಣು ಮಗಳಲ್ಲ, ಬಸವಾದಿ ಪ್ರಮಥರ ಆಶೋತ್ತರ ಪೂರೈಸಲು

ಕಲ್ಯಾಣ ಕಿರಣ

ಬಂದವರು. ಯಾವ ಸಾಧಕರಿಗಾಗಿ ಬರಬೇಕೆಂದು ಹಂಬಲಿಸುತ್ತೇವೆಯೋ ಅಂಥ ಸಾಧಕರು ಬಂದಾಗ ಆಶ್ರಯ ಕೊಡುವುದಿಲ್ಲ ಎಂದರೆ ಹೇಗೆ?" ಗುರುಗಳು ಹೇಳಿದರು. "ಗಂಡು ಮಕ್ಕಳು ಸಾಧಕರಿದ್ದರೆ ಅವಕಾಶ ಕೊಡಿರಿ. ಹೆಣ್ಣುಮಕ್ಕಳಿಗೆ ಬೇಡ." ಬಸಪ್ಪನವರ ಮಾತು. "ನಡುವೆ ಸುಳಿವಾತ್ಮ ಹೆಣ್ಣು ಅಲ್ಲ, ಗಂಡು ಅಲ್ಲ ಎಂದು ಹೆಣ್ಣು ಮಕ್ಕಳಿಗೂ ಅವಕಾಶ ಕೊಟ್ಟಿರುವುದು ನಮ್ಮ ಧರ್ಮ. ಗುರು ಬಸವಣ್ಣನವರ ತತ್ವ -ಸಿದ್ಧಾಂತ ಬರೀ ಭಾಷಣಕ್ಕೆ ಮಾತ್ರವೇ?" ಎಂದು ಗುರುಗಳು ಕೇಳಿದರು. "ಅದೆಲ್ಲ ವಾದಕ್ಕೆ ಅವಕಾಶವಿಲ್ಲ. ಅವರಿಗೆ ಆಶ್ರಯ ಕೊಡಕೂಡದು." ಇಷ್ಟು ಹೇಳಿ ಬಸಪ್ಪನವರು ಎದ್ದು ಹೋದರು.

ಪೂಜ್ಯ ಗುರುಗಳು ಮಠದಲ್ಲಿದ್ದ ಕೆಲವೇ ಸಾಧಕರ ಜೊತೆ ಚರ್ಚಿಸಿದರು. ನನ್ನ ಅಧ್ಯಾತ್ಮಿಕ ಆಸಕ್ತಿ, ನಿಲುವಿನ ಬಗ್ಗೆ ಅವರಿಗೆ ಗೌರವ-ಅಭಿಮಾನ ಇದ್ದುದರಿಂದ ಗುರುಗಳ ಅಭಿಪ್ರಾಯಕ್ಕೆ ಒತ್ತು ಕೊಟ್ಟರು. ಮತ್ತೊಮ್ಮೆ ಬಂದ ಬಸಪ್ಪನವರು "ಮಾತೆ ಮಹಾದೇವಿ ಮತ್ತು ಮಠ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು."ಎಂದಾಗ ಗುರುಗಳು ಹೇಳಿದರು "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ತತ್ವದಲ್ಲಿ ನನಗೆ ವಿಶ್ವಾಸವಿದೆ."ಎಂದು. "ಹಾಗಿದ್ದರೆ ನೀವು ಮಠವನ್ನು ಸಾದು ವೀರಶೈವ ಹಾಸ್ಟೆಲ್‌ಗೆ ಬರೆದುಕೊಡಬೇಕು." ಎಂದರು ಮಾಗನೂರು ಬಸಪ್ಪನವರು.

" ಇಲ್ಲ ಇದು ಒಂದು ಜಾತಿಯ ಸಮಾಜದ ಆಸ್ತಿಯಲ್ಲ. ನಾನು ಪ್ರವಚನ ಮಾಡಿ ಬೈಲಹೊಂಗಲ, ಗೋಕಾಕ, ಕಲಬುರ್ಗಿ, ತಾಂಡೂರು ಹೀಗೆ ಬೇರೆ ಬೇರೆ ಊರುಗಳಲ್ಲಿ ಸಂಗ್ರಹಿಸಿದ ಹಣದಿಂದ ಜಾಗ ಖರೀದಿಸಿ, ಕಟ್ಟಿದ ಮಠ. ಬೇಕಾದರೆ ಟ್ರಸ್ಟ್ ಮಾಡುತ್ತೇನೆ." ಪೂಜ್ಯ ಗುರುಗಳು ಎಂದರು. ಬಸಪ್ಪನವರು ಎದ್ದು ಹೋದರು.

ನನ್ನಿಂದಾಗಿ ಗುರುಗಳಿಗೆ ತೊಂದರೆಯಾಗುತ್ತಿದೆಯಲ್ಲ ಎಂದು ದುಃಖಿತಳಾದೆ. "ನನಗೆ ಒಪ್ಪಿಗೆ ಕೊಡಿರಿ. ನಾನು ಎಲ್ಲಾದರೂ ಹೊರಟು ಹೋಗುತ್ತೇನೆ. ಮಠಾಧೀಶರು, ಸ್ವಾಮಿಗಳು ಎಷ್ಟೋ ಜನ ಅನೈತಿಕವಾಗಿ ಸ್ತ್ರೀಯರೊಡನೆ ಸಂಬಂಧವಿಟ್ಟುಕೊಳ್ಳುತ್ತಾರೆ. ಒಬ್ಬ ಸ್ತ್ರೀಯು ಸಾಧಕಿಯಾಗಿ ಉದಾತ್ತ ಉದ್ದೇಶ ಇಟ್ಟುಕೊಂಡು ಬಂದರೆ ಆಕೆಗೆ ಆಶ್ರಯ ದೊರೆಯದು. ಎಂಥಾ ಸಮಾಜವಿದು!" ಎಂದು ಹೇಳಿದೆ. ಗುರುಗಳು ಒಪ್ಪಲಿಲ್ಲ. " ಜಗತ್ತು ಬಹಳ ಕೆಟ್ಟದಿದೆ. ಘನವಾದ ಉದ್ದೇಶವಿಟ್ಟುಕೊಂಡು ಬಂದ ನಿಮ್ಮ ಜೀವನ ವ್ಯರ್ಥವಾಗಬಾರದು. ಅದಕ್ಕೆ ನನ್ನ ಅಂತರಾತ್ಮ ಒಪ್ಪುವುದಿಲ್ಲ" ಎಂದು ಹೇಳಿದರು.

ಅಂದು ರಾತ್ರಿ ಮಠದ ಮೇಲೆ ಕಲ್ಲುಗಳು ದಪದಪ ಬಿದ್ದವು. ಇಡೀ ರಾತ್ರಿ ನಿದ್ರೆಯಿಲ್ಲದೆ ಮಠದಲ್ಲಿ ಇದ್ದವರೆಲ್ಲ ಕಾಲ ಕಳೆದಾಯಿತು. ಮರುದಿನ ಹಾಡಹಗಲಲ್ಲಿ ನಿಟುವಳ್ಳಿ ಹಾಲಪ್ಪ ಎಂಬುವವನ ನೇತೃತ್ವದಲ್ಲಿ ಐದಾರು ಜನ ಬಂದು ತುಂಬಿ ಬೆಳೆದ ಜೋಳದ ತೆನೆಗಳನ್ನು ಕತ್ತರಿಸಿಕೊಂಡು ಬಂಡಿಗೆ ತುಂಬಿಕೊಂಡು ಹೋದರು. ರಾತ್ರಿ ಮಠದ ಮೇಲೆ ಕಲ್ಲು ಎಸೆದುದನ್ನು, ಜೋಳದ ತೆನೆ ಕೊಯ್ದುಕೊಂಡು ಹೋದುದನ್ನು ತಿಳಿಸಿ ಪೋಲಿಸ್ ಕಂಪ್ಲೇಟ್ ಕೊಡಲು ಹೋದಾಗ ಈ ಘಟನೆಗಳ ಹಿಂದೆ ಪ್ರಭಾವಶಾಲಿ ಸ್ವಾಮಿಗಳ ಕೈವಾಡ ಇರುವುದರಿಂದ ಅವರ ವಿರುದ್ಧ ಕಂಪ್ಲೆಂಟ್ ತೆಗೆದುಕೊಳ್ಳುವುದಿಲ್ಲವಾಗಿ ಸ್ಪಷ್ಟವಾಗಿ ಹೇಳಿದರು. ನಾವು ರಾಜಕೀಯ ಪ್ರಭಾವ ಇರುವವರಲ್ಲ. ಬರೀ ಪ್ರವಚನ,ಪೂಜೆ, ಪ್ರಾರ್ಥನೆಗಳವರು. ಪೋಲೀಸರಿಗೆ ಬೇಕಾದುದು ಕಾನೂನು, ನೀತಿ, ನ್ಯಾಯ, ಧರ್ಮವಲ್ಲ-ರಾಜಕೀಯ ಪ್ರಭಾವ. ನಾವು ನಿಸ್ಸಹಾಯಕರಾದೆವು.

ಮರುದಿನ ಸುಮಾರು 11 ಗಂಟೆ; ಮಾಗನೂರು ಬಸಪ್ಪನವರ ಅತ್ಯಂತ ಆಪ್ತರಾದ, ವಾಯುವಿಹಾರದ ಸಂಗಾತಿಯೂ ಆದ ಕೊಟ್ರ ಬಸಪ್ಪನವರು ಗಾಬರಿಯಿಂದ ಬಂದರು. ಅವರಿಗೆ ಪೂಜ್ಯ ಅಪ್ಪಾಜಿಯವರ ಮೇಲೆ ಭಕ್ತಿ, ಗೌರವಗಳಿದ್ದಷ್ಟೇ ಅಭಿಮಾನ ವಾತ್ಸಲ್ಯಗಳಿದ್ದವು. ಅವರು

ಬಂದು ಪಾದ ನಮಸ್ಕಾರ ಮಾಡಿ "ಸ್ವಾಮಿ, ನೀವು ಇಲ್ಲಿಂದ ಎಲ್ಲಿಗಾದರೂ ಹೋಗಬೇಕು ನಿಮ್ಮ ಜೀವಕ್ಕೆ ಅಪಾಯವಿದೆ. ವಾಯುವಿಹಾರಕ್ಕೆ ಹೋದಾಗ ಒಂದು ವಿಷಯ ತಿಳಿಯಿತು. ನಿನ್ನೆ ಒಂದು ಗುಪ್ತ ಸಭೆ ನಡೆದಿದೆ. ಇಂದು ಸಂಜೆ 5 ರ ಮೇಲೆ ಸಬ್ ರಿಜಿಸ್ಟ್ರಾರರನ್ನು ಕರೆದುಕೊಂಡು ಬಂದು ಈ ಆಸ್ತಿಯನ್ನು ಬರೆಸಿಕೊಳ್ಳುವವರಿದ್ದಾರೆ........".

"ಇಲ್ಲ.... ನಾನು ಬರೆದುಕೊಡುವುದಿಲ್ಲ, ಸಹಿ ಮಾಡುವುದಿಲ್ಲ. ಇದು ಯಾವುದೇ ಒಂದು ಜಾತಿಗೆ ಸಂಬಂಧಿಸಿಲ್ಲ. ಇದರಲ್ಲಿ ಎಲ್ಲರ ಹಣ ಸೇರಿದೆ", ಗುರುಗಳು ಹೇಳಿದರು. "ಹೊಡೆದು ಬಡಿದಾದರೂ ಸಹಿ ಮಾಡಿಸಿಕೊಳ್ಳುತ್ತಾರೆ. ನಿಮ್ಮಿಂದ ಇನ್ನೂ ಬಹಳಷ್ಟು ಕೆಲಸ ವಾಗಬೇಕಾಗಿದೆ. ದಯವಿಟ್ಟು ಇಲ್ಲಿಂದ ಹೋಗಿರಿ " ವಿನಂತಿಸಿದರು. " ಇಲ್ಲ, ಹೇಡಿಯಂತೆ ಓಡಿ ಹೋಗಲಾರೆ. ಮರಣವೇ ಮಹಾನವಮಿ. ಪ್ರಾಣಹೋದರೂ ಚಿಂತೆಯಿಲ್ಲ" ಗುರುಗಳು ವೀರಾವೇಶದಿಂದ ನುಡಿದರು.

"ನಿಜ, ಜೀವ ಹೋದರೆ ಪ್ರಯೋಜನವೇನು? ನಮ್ಮ ದೇಶದಲ್ಲಿ ಎಂಥಾ ಅಪರಾಧಗಳನ್ನೂ ಮುಚ್ಚಿ ಹಾಕಿ ಬಿಡುತ್ತಾರೆ. ದಯವಿಟ್ಟು ನನ್ನ ಮಾತು ಕೇಳಿರಿ."

ಅವರ ಕಳಕಳಿ ನೋಡಿ ನಮಗೂ ಸತ್ಯವೆನ್ನಿಸಿತು. "ಅಪ್ಪಾಜಿ, ನೀವು ಜೀವಂತವಿದ್ದರೆ ಇಂಥಾ 10 ಆಸ್ತಿ ಮಾಡಬಹುದು. ನಿಮ್ಮಂತಹ ಪ್ರತಿಭಾವಂತರು ದುರಂತಕ್ಕೀಡಾಗಬಾರದು. ದಯಮಾಡಿ ಒಪ್ಪಿಕೊಳ್ಳಿ" ಎಂದೆವು.

ಮತ್ತೊಂದು ವಿಷಾದನೀಯ ಸಂಗತಿ ಎಂದರೆ ಪೂಜ್ಯ ಅಪ್ಪಾಜಿಯವರಿಂದಲೇ ದೀಕ್ಷೆ ಪಡೆದು, ಅವರ ಆಶ್ರಯದಲ್ಲೇ ಇದ್ದ ಬಾಲಚಂದ್ರ ಚೆನ್ನಿ ಎಂಬುವವರು ವಿರೋಧಿಗಳ ಜೊತೆ ಸೇರಿ ಪ್ರತಿಕ್ಷಣಕ್ಕೂ ಇಲ್ಲಿಂದ ಸುದ್ದಿ ರವಾನೆ ಮಾಡುತ್ತಿದ್ದರು. ಒಂದು ಪ್ರಿಂಟಿಂಗ್ ಪ್ರೆಸ್ ಇತ್ತು. ಮಠವನ್ನು ಬರೆದುಕೊಟ್ಟರೆ ಆ ಪ್ರೆಸ್ಸನ್ನು ಬಾಲಚಂದ್ರ ಚೆನ್ನಿಗೇ ಕೊಡುವುದಾಗಿ ವಿರೋಧಿಗಳು ಮಾತುಕೊಟ್ಟಿದ್ದರು. ಕೊಟ್ರಬಸಪ್ಪನವರು ಬಂದು ಹೋದ ಸುದ್ದಿಯನ್ನು ಅವರ ಸಲಹೆಯನ್ನು ಮುಟ್ಟಿಸಲು ಚೆನ್ನಿಯವರು ಸೈಕಲ್ ಹತ್ತಿ ಹೊರಟರು. ಅಪ್ಪಾಜಿ ಎಲ್ಲರನ್ನು ನಂಬುವ ಮುಗ್ಧ ಮನಸ್ಸಿನವರು. ಮಾಗನೂರು ಬಸಪ್ಪನವರನ್ನು ತಂದೆಗಿಂತಲೂ ಹೆಚ್ಚು ಎಂದು ನಂಬಿ ಪ್ರವಚನ ಮಾಡಿದಲ್ಲಿಂದೆಲ್ಲ ಮಠಕಟ್ಟಲು ಹಣ ಕಳಿಸುತ್ತಿದ್ದರು. ಬಾಲಚಂದ್ರ ಚೆನ್ನಿ ಲಗುಬಗೆಯಿಂದ ಸೈಕಲ್ ಹತ್ತಿ ಹೊರಟಾಗ ನಮಗೆಲ್ಲ ಅವರ ಪಿತೂರಿಯ ಬಗ್ಗೆ ಸಂದೇಹ ಬಂದಿತು. (ಅವರೀಗ ಲಿಂಗೈಕ್ಯರಾಗಿದ್ದಾರೆ. ಕೆಲವು ವರ್ಷಗಳ ಹಿಂದೆ ಬಂದು, ಮಾಡಿದ ತಪ್ಪಿಗೆ ಕ್ಷಮೆ ಕೇಳಿದರು. ಗುರುದ್ರೋಹ ಮಾಡಿದ್ದರಿಂದ ಪಡಬಾರದ ಕಷ್ಟ ಪಡುತ್ತಿದ್ದೇನೆ ಎಂದರು. ಹೃದ್ರೋಗ ಬಂದಿತು. ಅದಕ್ಕಾಗಿ ಅವರು ಲಿಂಗೈಕ್ಯರಾಗುವವರೆಗೆ ಪ್ರತಿ ತಿಂಗಳು 1000/-(ಒಂದು ಸಾವಿರ)ರೂ. ಸಹಾಯ ಧನ ಕಳಿಸುತ್ತಿದ್ದೆ. ಅವರು ಲಿಂಗೈಕ್ಯರಾದ ಮೇಲೆ ಅವರ ಮೊಮ್ಮಗ ಬಸವಕಿರಣನ ವಿದ್ಯಾಭ್ಯಾಸಕ್ಕೆ 500ರೂ. ಸಹಾಯಧನ ಕಳಿಸುತ್ತಿದ್ದೇವೆ)

ದಾವಣಗೆರೆಯಿಂದ ರೈಲು ಅಥವಾ ಬಸ್ ಹತ್ತಿದರೆ ವಿರೋಧಿಗಳ ಕಡೆಯವರು ದೌರ್ಜನ್ಯ ಮಾಡಬಹುದು ಎಂದು ಒಂದು ಟ್ಯಾಕ್ಸಿ ತರಿಸಿದೆವು. ಪೂಜ್ಯ ಅಪ್ಪಾಜಿ, ನಾನು ಮತ್ತು ಒಬ್ಬ ಶಿಷ್ಯ ಶೇಖರಯ್ಯನನ್ನು ಕರೆದುಕೊಂಡು ಹರಿಹರದಲ್ಲಿ ರೈಲು ಹತ್ತಲು ನಿರ್ಧರಿಸಿದೆವು. ಏನೂ ವ್ಯವಸ್ಥೆ ಮಾಡುವಷ್ಟು ವ್ಯವಧಾನವಿರಲಿಲ್ಲ. ಒಂದು ಟ್ರಂಕಿನಲ್ಲಿ ಮುಖ್ಯವಾದ ಪ್ರವಚನ ಪುಸ್ತಕ, ಪೂಜಾ ಸಾಮಾನು ಇಟ್ಟುಕೊಂಡು ಹೊರಟೆವು. ಶರಣ. ಶಿವಾನಂದರನ್ನು ಮಠವನ್ನು ನೋಡಿಕೊಳ್ಳಲು ಬಿಟ್ಟೆವು. (ಈಗ ಅವರು ಶಿವಾನಂದ ಗುರೂಜಿ ಎಂಬ ಹೆಸರಿನಿಂದ ಕುಂಬಳೂರು ಎಂಬಲ್ಲಿ ಗುರುಕುಲ ಸ್ಥಾಪಿಸಿದ್ದಾರೆ.) ಏಕೆಂದರೆ ಅವರಲ್ಲಿ ಮಾನಸಿಕ ದೃಢತ್ವ, ಕಷ್ಟ ಸಹಿಷ್ಣುತೆ, ಎಂಥಾ ಕಠಿಣ ಪ್ರಸಂಗವನ್ನೂ ಎದುರಿಸುವ ತಾಳ್ಮೆ ಇತ್ತು. ಇದ್ದಕ್ಕಿದ್ದಂತೆಯೇ ಹೊರಟುದರಿಂದ ಮಠದಲ್ಲಿ ಏನೂ ವ್ಯವಸ್ಥೆ ಮಾಡಲಾಗಿರಲಿಲ್ಲ. ದುಡ್ಡು ಬಹಳವಿರಲಿಲ್ಲ. ಕೇವಲ ಮೂರುವರೆ ಸಾವಿರ ರೂಗಳು ಇದ್ದವು. ಅವನ್ನೇ ತೆಗೆದುಕೊಂಡು ದೇವರ ಮೇಲೆ ಭಾರ ಹಾಕಿ ಹೊರಟು ಬಿಟ್ಟೆವು. ಎಲ್ಲಿಗೆ ಹೋಗಬೇಕು. ರೈಲು ಮುಂಬೈಗೆ

ಹೋಗುವಂತಹುದು. ಮುಂಬೈಗೆ ಹೋದೆವು. ಪೂಜ್ಯ ಅಪ್ಪಾಜಿಯವರ ಬಾಲ್ಯ ಮಿತ್ರರಾದ ಬಸವನ ಬಾಗೇವಾಡಿ ತಾಲ್ಲೋಕಿನ ಪಿ.ಎಂ.ಜಲಪುರ ಎಂಬುವವರ ವಿಳಾಸವಿತ್ತು. ಅವರಲ್ಲಿಗೆ ಹೋಗಿ ನಿಡಿದಾದ ಉಸಿರು ಬಿಟ್ಟೆವು. ಸುಮಾರು 3-4 ದಿನ ಮಾನಸಿಕ ಒತ್ತಡದಲ್ಲಿ ಕಾಲ ಕಳೆದಾಗಿತ್ತು. ಅಧ್ಯಾತ್ಮಿಕ ಜೀವನದ ಆಕರ್ಷಣೆ ಹಿಮಾಲಯ, ಹರದ್ವಾರ, ಋಷಿಕೇಶ. ಎರಡೂ ಮೂರು ದಿನ ಇದ್ದು ಅಲ್ಲಿಂದ ಹರದ್ವಾರಕ್ಕೆ ಹೊರಟೆವು. ಪೂಜ್ಯ ಅಪ್ಪಾಜಿಯವರನ್ನು ರಕ್ಷಿಸಿಕೊಳ್ಳುವ ಉದ್ದೇಶದಿಂದ ಇಂಥಾ ದುಃಸಾಹಸಕ್ಕೆ ಕೈ ಹಾಕಬೇಕಾಯಿತು.

ಇತ್ತ ವಿರೋಧಿಗಳು ಬಗೆಬಗೆಯ ವದಂತಿ ಹಬ್ಬಿಸಿದರು. ಒಳಗೆ ಮಾಡುವ ಪಿತೂರಿಗಳೇ ಬೇರೆ ಹೊರಗೆ ಹಬ್ಬಿಸುವ ವದಂತಿಗಳೇ ಬೇರೆ. "ಸ್ವಾಮಿ ಒಬ್ಬ ಹುಡುಗಿಯನ್ನು ಕಟ್ಟಿಕೊಂಡು ಓಡಿ ಹೋದ." ಎಂಬ ಸುದ್ದಿ ಎಬ್ಬಿಸಿದ್ದರಿಂದ ನಮ್ಮ ಪೂರ್ವಾಶ್ರಮದವರು, ತಾಯಿಯವರು ಅತ್ತೂ ಅತ್ತೂ ಇಟ್ಟರಂತೆ. ಸಾಧಕ ಶಿವಾನಂದರನ್ನು ಏಕಾಏಕಿ ದುರ್ಜನರ ಮಧ್ಯೆ ಬಿಟ್ಟು ಬಂದುದಕ್ಕಾಗಿ ನಮಗೆ ಬಹಳ ಚಿಂತೆಯಾಯಿತಾದರೂ ಅವರ ಸ್ವಭಾವದ ದೃಢತೆ ತಿಳಿದುದರಿಂದ ಧೈರ್ಯ ತಾಳುತ್ತಿದ್ದೆವು. ಅವರೊಬ್ಬರಿಗೆ ಮಾತ್ರ ನಾವಿರುವ ವಿಳಾಸ ತಿಳಿಸುತ್ತಿದ್ದೆವು. ಪರಮಾತ್ಮನಲ್ಲಿದ್ದ ಅಚಲ ವಿಶ್ವಾಸ ಈ ಕಷ್ಟಗಳಿಂದ ಎಳ್ಳಷ್ಟೂ ಕಡಿಮೆಯಾಗಲಿಲ್ಲ. "ನಾವು ನಂಬಿದ್ದೇವೆ. ಖಂಡಿತಾ ಒಳ್ಳೆಯದಾಗುತ್ತದೆ." ಎಂಬ ನಂಬಿಕೆ ದೃಢವಾಗಿತ್ತು. "ಇದು ಪರಮಾತ್ಮನ ಪರೀಕ್ಷೆ ಇರಬಹುದು. ಇದರಲ್ಲಿ ಗೆಲ್ಲಬೇಕೇ ವಿನಾ ಸೋಲಬಾರದು" ಎಂಬ ಛಲ ಗಟ್ಟಿಗೊಳ್ಳುತ್ತಿತ್ತು.

ಕಟೆದು ಕಟೆದು ಎನ್ನ ಮೂರ್ತಿಯ ಮಾಡಯ್ಯ
ಒರೆದು ಒರೆದು ಎನ್ನ ನಿನ್ನೊಡವೆಯ ಮಾಡಯ್ಯ
ಕೊರೆದು ಕೊರೆದು ಎನ್ನ ಕೊಳಲ ಮಾಡಯ್ಯ
ಉರಿಸಿ ಉರಿಸಿ ಎನ್ನ ಹರವಿಯ ಮಾಡಯ್ಯಾ
ಜರಿದು ಜರಿದು ಎನ್ನ ಪರಿಪೂರ್ಣ ಮಾಡಯ್ಯ
ನಿನಗಾಗಿ ಎನ್ನ ಬಾಳ ಬಾಳಿಸಯ್ಯಾ ಸಚ್ಚಿದಾನಂದ !

ಎಂದು ಹಾಡಿಕೊಳ್ಳುತ್ತ ಕಾಲಕ್ಕಾಗಿ ಕಾಯುತ್ತ, ಬಂದ ಎಲ್ಲ ಮಾನಾಪಮಾನಗಳನ್ನು ಸ್ತುತಿ -ನಿಂದೆಗಳನ್ನು, ವಾಮ-ಕ್ಷೇಮವನ್ನು, ಹಾನಿ-ವೃದ್ಧಿಗಳನ್ನು ಸಚ್ಚಿದಾನಂದನಿಗೆ ಅರ್ಪಿಸಿದೆವು.

ಋಷಿಕೇಶದ ಸಂದರ್ಶನ

ಸಂತ ಮಹಾಂತರ ನಾಡಾದ ಉತ್ತರ ಭಾರತವನ್ನು ಸಂದರ್ಶಿಸುವ ಅಪೇಕ್ಷೆ ಬಹಳ ದಿನಗಳದ್ದು. ಅದಕ್ಕೆ ಸಮಯಾವಕಾಶ ಸಿಕ್ಕಿರಲಿಲ್ಲ. ಮುಂಬೈಯಿಂದ ಹೊರಟ ಮೇಲೆ ಕಾಶಿ, ಪ್ರಯಾಗ, ಹರದ್ವಾರಗಳನ್ನು ನೋಡಿ ಋಷಿಕೇಶವನ್ನು ತಲ್ಪಿದೆವು. ಹೋದ ತಕ್ಷಣ ಶ್ರೀ ಶಿವಾನಂದಾಶ್ರಮಕ್ಕೆ ಹೋದೆವು. ಒಂದು ವಾರಕಾಲ ಇದ್ದೆವು. ಅಧ್ಯಕ್ಷರಾದ ಪೂಜ್ಯ ಶ್ರೀ ಚಿದಾನಂದ ಸ್ವಾಮೀಜಿ ಕನ್ನಡ ನಾಡಿನಿಂದ ಹೋದವರು. ಗೌರವಾದರಗಳಿಂದ ಕಂಡರು. ಅಲ್ಲಿ ಪರಿಚಯವಾದ ಮತ್ತೊಬ್ಬ ಮಹಾನು ಭಾವರೆಂದರೆ ಸ್ವಾಮಿ ನಾದಬ್ರಹ್ಮಾನಂದರು. ಸಂಗೀತ ವಿದ್ವಾಂಸರಾದ ಅವರು ಮೂಲತಃ ನರಗುಂದ ದವರು. ಬಹಳ ಹಿಂದೆಯೇ ಊರನ್ನು ಬಿಟ್ಟು ಸಾಧಕರಾಗಿ ಋಷಿಕೇಶಕ್ಕೆ ಹೋಗಿ ಸ್ವಾಮಿ ಶಿವಾನಂದರ ಶಿಷ್ಯರಾಗಿ ಆಶ್ರಮದಲ್ಲಿ ಸಂಗೀತ ಶಾಲೆಯನ್ನು ನಡೆಸುತ್ತಿದ್ದರು. ನಂತರ ಅವರು ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ ಭೇಟಿಯಾದರು. ಒಮ್ಮೆ ಬೆಂಗಳೂರಿನ ಬಸವ ಮಂಟಪಕ್ಕೂ ಬಂದಿದ್ದರು. ಪರಿಚಯವಾದ ಮತ್ತೋರ್ವ ತ್ಯಾಗಿ ಡಾ.ಮಾತೆ ಹೃದಯಾನಂದರು. ಅವರು ಆಶ್ರಮದ ವೈದ್ಯಕೀಯ ವಿಭಾಗವನ್ನು ನೋಡಿಕೊಳ್ಳುತ್ತಿದ್ದರು. ನಮಗೆ ಅನುಷ್ಠಾನ ಮಾಡಲು ಪ್ರಶಾಂತವಾದ ಜಾಗವು ಬೇಕಾಗಿತ್ತೆಂದು ಹುಡುಕುತ್ತಿದ್ದೆವು. ಮೋಕ್ಷಾಶ್ರಮ ಎಂಬ ವಿಸ್ತಾರವಾದ ಜಾಗ ಸಿಕ್ಕಿತು. ಅದರ ಮುಖ್ಯಸ್ಥರು ಶ್ರೀ ಕೃಪಾನಂದ ಬ್ರಹ್ಮಚಾರಿ ಮತ್ತು ಡಾ.ಸ್ವಾಮಿ ಮನ್ಮಥನ್; ಕೇರಳದವರು. ಇರಲಿಕ್ಕೆ ಅವಕಾಶ ಕೊಟ್ಟರು. ಆಶ್ರಮದ ಪ್ರಸಾದ ಎರಡೂ ಹೊತ್ತು ಇರುತ್ತಿತ್ತು. ಅಧ್ಯಯನ, ಅನುಷ್ಠಾನ, ವಚನ ರಚನೆ ಎಲ್ಲವೂ ಸಾಗುತ್ತಿತ್ತು. ಗಂಗಾನದಿಯ ದಂಡೆಯ ಮೇಲೆ ದಟ್ಟ ಹಸಿರಿನ ಬೆಟ್ಟದ ಹಿನ್ನೆಲೆಯಲ್ಲಿ ಕುಳಿತು ವಚನಗಳನ್ನು

ಗೀತೆಗಳನ್ನು ಬರೆಯಲು ಉತ್ಸಾಹ ಉಕ್ಕುತ್ತಿತ್ತು. ಆಗ ರಚಿಸಿದ ಗೀತೆಗಳನ್ನು ಗಂಗಾತರಂಗ ಎಂಬ ಕೃತಿಯಾಗಿ ಪ್ರಕಟಿಸಲಾಯಿತು.


ಉತ್ತರ ಕರ್ನಾಟಕದಿಂದ ಬಂದ ಒಬ್ಬ ಮುದುಕ ಪರಿಚಯವಾದ. ಅವನಿಗೆ ಆಶ್ರಯವು ಬೇಕಾಗಿತ್ತು. ನಮ್ಮ ಸಂಗಡ ಉಳಿದ. ಬಹಳ ಚೆನ್ನಾಗಿ ನಮ್ಮ ದೇಶದ ಅಡಿಗೆ ಮಾಡುತ್ತಿದ್ದ. ಸ್ವಾಮಿ ನಾದಬ್ರಹ್ಮಾನಂದರು ವಾಯುವಿಹಾರ ಮಾಡುತ್ತ ಬಂದು ನಮ್ಮ ಅಡಿಗೆಯವನು ಮಾಡುತ್ತಿದ್ದ ಉಪಮಾ (ಉಪ್ಪಿಟ್ಟು) ತಿಂದು ಸಂತೋಷಪಡುತ್ತಿದ್ದರು. ಶಿವಾನಂದಾಶ್ರಮದಲ್ಲಿ ಅವರಿಗಾಗಿ ಪ್ರತ್ಯೇಕ ಕೋಣೆ ಇತ್ತು. ನಾವೂ ಆಗಾಗ ಅವರಲ್ಲಿಗೆ ಹೋಗಿ ಬರುತ್ತಿದ್ದೆವು. ಒಮ್ಮೆ ಅವರ ಕೋಣೆಯಲ್ಲಿದ್ದ ಪೇಯಿಂಟಿಂಗ್ಸ್ ನೋಡುತ್ತಿದ್ದೆವು. ಒಂದು ಚಿತ್ರವಿತ್ತು. ಅದರಲ್ಲಿ ಓರ್ವ ಮಹಿಳೆ ತಂಬೂರಿ ಹಿಡಿದು ಹಾಡುವ ಚಿತ್ರವದು. "ಈ ಚಿತ್ರ ಬಹಳ ಚೆನ್ನಾಗಿದೆ." ಎಂದೆ ನಾನು. "ಇದರ ಹಿಂದೆ ಒಂದು ಕಥೆ ಇದೆ." ಎಂದು ಸ್ವಾಮಿ ನಾದಬ್ರಹ್ಮಾನಂದರು ಹೀಗೆ ಹೇಳಿದರು.

ಆ ಚಿತ್ರ ಬರೆದ ಕಲಾವಿದೆಯ ಹೆಸರು ಉಷಾ. ಹುಟ್ಟಿದ್ದು ಡೆಹರಾಡೂನಿನ ಒಬ್ಬ ಶ್ರೀಮಂತರ ಮನೆಯಲ್ಲಿ. ಸ್ವಾಮೀಜಿ ಡೆಹರಾಡೂನ್‌ನ ಸಂಗೀತ ಪಾಠಶಾಲೆಯಲ್ಲೂ ಕೆಲಕಾಲ ಸಂಗೀತ ಕಲಿಸುತ್ತಿದ್ದರು. ಆಗ ಈಕೆಯೂ ಬಂದು ಕಲಿಯುತ್ತಿದ್ದಳು. ಆಗಲೇ ಒಂದು ಪೇಯಿಂಟಿಂಗ್ ಅನ್ನು ಕೊಡುಗೆಯಾಗಿ ಕೊಟ್ಟಿದ್ದು. ಮುಂದೆ ಬಿ.ಎ. ಓದುವಾಗ ಕಾಯಿಲೆ ವಾಸಿಯಾಗದೆ ತೀರಿಕೊಂಡಳು. ನಂತರ ಈಕೆ ಬೇರೊಂದು ಬಡ ಕುಟುಂಬದಲ್ಲಿ ಜನಿಸಿದಳು. ಭಾರತ ವಿಭಜನೆಯಾಗುವ ಕಾಲ. ಬಡ ತಾಯಿ ತಂದೆಯರು ಏನು ಮಾಡಬೇಕು ಎಂದು ತೋಚದೆ ದಿಗ್ಭ್ರಾಂತರಾಗಿದ್ದಾಗ 6 ವರ್ಷದ ಈ ಹುಡುಗಿ "ನಮ್ಮೂರಿಗೆ ಹೋಗೋಣ" ಎಂದು ಒತ್ತಾಯಿಸಿ ಅವರನ್ನು ಡೆಹ್ರಾಡೂನಿಗೆ ಕರೆತಂದಳು. ಚಾಚೂ ತಪ್ಪದೆ ಮನೆಯನ್ನು ಕಂಡು ಹಿಡಿದು ಈ ಜನ್ಮದ ತಾಯಿತಂದೆಗಳನ್ನು ಪರಿಚಯಿಸಿದಳು. ಮೊದಲಿಗೆ ನಂಬಿಕೆ ಬರಲಿಲ್ಲ. ಉಷಾ ಆಸ್ಪತ್ರೆಗೆ ಸೇರುವ ಮೊದಲು ಗಡಿಯಾರವನ್ನು ಬಿಚ್ಚಿಟ್ಟಿದ್ದ ಜಾಗ ತೋರಿಸಿದಳು. ಕಾಲೇಜಿನಲ್ಲಿ ಹುಡುಗಿಯರೊಡನೆ ತೆಗೆಸಿದ ಗ್ರೂಪ್ ಫೋಟೋದಲ್ಲಿ ತನ್ನನ್ನು ಗುರುತಿಸಿದಳು. ಹಿಂದಿನ ಜನ್ಮದ ತಾಯಿ ತಂದೆಗಳು ಈ ಜನ್ಮದ ತಾಯಿ ತಂದೆಗಳಿಗೆ, ಮಗಳಿಗೆ ಆಶ್ರಯ ನೀಡಿದರು. ನಾದಬ್ರಹ್ಮಾನಂದ ಸ್ವಾಮಿಗಳಿಗೆ ಕೊಟ್ಟ ಚಿತ್ರ ನೋಡಿ ಆ ಹುಡುಗಿ ತಟ್ಟನೆ ಗುರ್ತು ಹಿಡಿದು, "ಇದು ನಾನೇ ಬರೆದು ಕೊಟ್ಟ ಚಿತ್ರವಲ್ಲವೆ?" ಎಂದಳಂತೆ. ಸ್ವಾಮೀಜಿ ಹೇಳಿದ ಈ ಪ್ರಸಂಗ ನನಗೆ ಇನ್ನೂ ಹಚ್ಚ ಹಸುರಾಗಿ ನೆನಪಿದೆ.


ಪೂಜ್ಯ ಅಪ್ಪಾಜಿ ತಾರುಣ್ಯದ ಹುಮ್ಮಸ್ಸಿನಲ್ಲಿ ಬೆಟ್ಟ ಇಳಿದು ಗಂಗಾನದಿಯಲ್ಲಿ ಈಜಿ ಬರುತ್ತಿದ್ದರು. ದಿನಕ್ಕೆರಡು ಬಾರಿ ಈಜಲು ಹೋಗುತ್ತಿದ್ದರು. ಕೈಕಾಲು ಎಲ್ಲ ಹಿಡಿದು ಬಿಟ್ಟವು. ಮಡಿಚಲು ಬರದಂತೆ ಆಯಿತು. ಏನೋ ವಾಸಿಯಾಗದ ಕಾಯಿಲೆ ಬಂದಿತೆಂದು ಗಾಬರಿಯಾಗಿ, "ಶೇಖರನೊಡನೆ ನೀವು ನಮ್ಮ ದೇಶಕ್ಕೆ ಹೋಗಿರಿ. ನನಗೆ ಏನೋ ಕಾಯಿಲೆ ಬಂದಿತು." ಎಂದರು. "ಎಲ್ಲಾದರೂ ಉಂಟೆ. ಕಷ್ಟಕಾಲದಲ್ಲಿ, ಕಾಯಿಲೆ ಬಂದಾಗ ಬಿಟ್ಟು ಹೋಗಲು ಸಾಧ್ಯವೆ? ನಿಮ್ಮ ತ್ಯಾಗದ ಮುಂದೆ ಹೀಗೆ ಸ್ವಾರ್ಥ ಸಾಧಿಸಲು ಸಾಧ್ಯವೆ?" ಎಂದೆವು. ಶ್ರೀ ಕೃಪಾನಂದ ಬ್ರಹ್ಮಚಾರಿಯವರು ಬಂದು ನೋಡಿ ತಿಕ್ಕಲು ಎಣ್ಣೆ ಕೊಟ್ಟರು. ಎರಡೂ ಹೊತ್ತು ಗಂಗಾನದಿಯಲ್ಲಿ ಈಜಾಡದಿರಲು ಹೇಳಿ ಬಿಸಿ ನೀರಿನ ಸ್ನಾನವನ್ನೇ ಮಾಡಬೇಕು. ಮತ್ತು ಕಾಫಿ ಕುಡಿಯಬೇಕು" ಎಂದು ಸಲಹೆ ನೀಡಿದರು. ನಮಗೆ ತಣ್ಣೀರಿನ ಸ್ನಾನ ಅಭ್ಯಾಸವಾಗಿತ್ತು ಮತ್ತು ಕಾಫಿ-ಟೀ ಕುಡಿಯುತ್ತಿರಲಿಲ್ಲ. ಸ್ವಾಮೀಜಿಯವರ ಸಲಹೆಯಂತೆ ಮಾಡಿದಾಗ ಒಂದು ವಾರದಲ್ಲಿ ಆರಾಮವಾಯಿತು.

ಹೀಗಿರುವಾಗ ಒಂದು ದಿನ ಆಶ್ರಮಕ್ಕೆ ಶ್ರದ್ಧಾಮಾತಾ ಎಂಬುವವರ ಆಗಮನವಾಯಿತು. ಅವರು ರಾಜಕೀಯವಾಗಿಯೂ ಸಹ ಪ್ರಭಾವವುಳ್ಳವರೆಂದು ಆಶ್ರಮವಾಸಿಗಳು ಮಾತನಾಡುತ್ತಿದ್ದರು. ನನ್ನನ್ನು ನೋಡಿದವರೇ "ಗುರೂಜಿ, ಇವರನ್ನು ಜೊತೆಗೆ ಕಳುಹಿಸಿಕೊಡಿರಿ, ಧರ್ಮ ಪ್ರಚಾರಕ್ಕೆ ನಾನು ರಷ್ಯಾಕ್ಕೆ ಹೋಗುತ್ತಿದ್ದೇನೆ. ಜೊತೆಗೆ ಕರೆದುಕೊಂಡು ಹೋಗುವೆ". ಎಂದರು. "ನಾನು ಇನ್ನಷ್ಟು ಅಧ್ಯಯನ ಮಾಡಿ ಸ್ವತಂತ್ರವಾಗಿ ವಿದೇಶಕ್ಕೆ ಹೋಗಿ ಧರ್ಮ ಪ್ರಚಾರ ಮಾಡುತ್ತೇನೆ." ಎಂದು ಅವರೊಡನೆ ಹೋಗಲು ನಿರಾಕರಿಸಿದೆ.

(ಮುಂದುವರೆಯುವುದು.....)



ಶರಣ ಮೇಳದ ಬೆಳ್ಳಿಹಬ್ಬದ ನಿಮಿತ್ತ ಬೆಳ್ಳಿ ನಾಣ್ಯ ಬಿಡುಗಡೆ



ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರದಲ್ಲಿ ಬಸವಣ್ಣನವರ ಪಾತ್ರಧಾರಿಗಳಾದ ಅಶೋಕ ಅವರಿಗೆ ಶರಣ ರತ್ನ ಪ್ರಶಸ್ತಿ ಪ್ರದಾನ



ದಿ. 14-1-2012 ಸಮುದಾಯದ ಪ್ರಾರ್ಥನಾ ನಿರತ ಶರಣ ಬಂಧುಗಳು



ಸಮುದಾಯ ಪ್ರಾರ್ಥನೆಗೆ ಮೊದಲು ಮಹಾಮನೆ ಮುಂದೆ ಧ್ವಜಾರೋಹಣ ಮಹಾಮನೆಯ ಮೇಲೆ ಪೂಜ್ಯರು,
ಗಣನಾಯಕ, ನಾಯಕಿಯರು ಹಾಗೂ ಮುಂಭಾಗದಲ್ಲಿ ಶರಣ ಸಮೂಹ



CPMG/KA/BGW/50/2012-2014, RNI 19980/70, POSTED AT MBC BANGALORE GPO
ON 3,10,20 OF EVERY MONTH. LICENCED TO POST WITHOUT PRE PAYMENT
WPP-17, PAGES 32+4 (COVER PAGES)